WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

# ಶ್ರೀ ಶಾರದಾ


ಮಾಸಪತ್ರಿಕೆ – 17 ಜೂನ್ 2011

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-11 ಸಂಚಿಕೆ-6 ಪುಟಗಳು-10 Registered Under No.J/UDP/1260/2009-2011 Dated from 01-12-2008 to 31-12-2011


ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ - ಡಾ। ಎಚ್.ವಿ.ನರಸಿಂಹಮೂರ್ತಿ ಪುಟ-7
ಶ್ರೀ ಕೃಷ್ಣಾಯನ - ಕೆ. ಆತ್ಮಾರಾಮ ಶಾಸ್ತ್ರೀ, ಬೆಂಗಳೂರು ಪುಟ-2



ಮೈಸೂರು:ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ಘಟಕದ ಕಾರ್ಯಕ್ರಮ ರಮಾವಾಣಿ ಟಿ.ಸಿ.ರಾವ್ ಪುಟ-5
ನೀಲಾವರ ಲಕ್ಷ್ಮೀನಾರಾಯಣ ರಾವ್ ಮತ್ತು ಹಿರಿಯಡ್ಕ ಗೋಪಾಲರಾವ್ ಇವರಿಗೆ ಸನ್ಮಾನ ಪುಟ-8



## “ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ”-ಜಗದ್ಗುರುಗಳು



“ಯಾವುದನ್ನು ಧರ್ಮವೆಂದು ತಿಳಿಯಬೇಕು? ಯಾವುದನ್ನು ಅಧರ್ಮವೆಂದು ಭಾವಿಸಬೇಕು? ಧರ್ಮವನ್ನು ರಕ್ಷಣೆ ಮಾಡುವುದು ಎಂದರೇನು? ಅಧರ್ಮವನ್ನು ತ್ಯಜಿಸಬೇಕೆಂಬುದರ ಅರ್ಥವೇನು? ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳ ಬೇಕಾಗಿದೆ. ಧರ್ಮವೆಂದರೆ ವಸ್ತು- ಪದಾರ್ಥವಲ್ಲ. ಅದನ್ನು ರಕ್ಷಿಸಿಡಲು ಅದು ಧನವಲ್ಲ. ಅಂದರೆ ಇವೆಲ್ಲಕ್ಕೂ ಅರ್ಥವನ್ನು ಶಾಸ್ತ್ರ- ವೇದಗಳೇ ಹೇಳುತ್ತವೆ. ವೇದಗಳು ನಮಗೆ ಹೀಗೇ ಇರಬೇಕೆಂದು ಅಪ್ಪಣೆ ಮಾಡಿವೆ. ಅದು ಭಗವಂತನ ಆಜ್ಞೆ. **ಯಾವುದನ್ನು ನಾವು ಆಚರಣೆ ಮಾಡುವುದರಿಂದ ನಮಗೆ ಒಳ್ಳೆಯದಾಗುವುದೋ ಅದು ಧರ್ಮ. ಯಾವ ಆಚರಣೆಯಿಂದ ನಮಗೆ ದುಃಖ-ತೊಂದರೆ ಉಂಟಾಗುತ್ತದೆಯೋ ಅದು ಅಧರ್ಮ.**

ಧರ್ಮಕ್ಕೆ ಫಲ ಸುಖ; ಅಧರ್ಮಕ್ಕೆ ಫಲ ದುಃಖ. ಸ್ವಧರ್ಮೇನಿಧನಂ ಶ್ರೇಯಾಃ ಪರ ಧರ್ಮೋ ಭಯಾವಹಃ ಎಂಬ ಗೀತೆಯ ವಾಕ್ಯದಂತೆ ಪ್ರತಿಯೊಬ್ಬರೂ ಅವರವರ

(4ನೇ ಪುಟಕ್ಕೆ....)

## ಉಡುಪಿಯಲ್ಲಿ ಶ್ರೀ ಶಂಕರ ಜಯಂತಿ ಆಚರಣೆ

ತಾ.07-05-2011ರಂದು ಸಂಜೆ 4 ಗಂಟೆಗೆ ಜ್ಞಾನ ಭಾರತಿಯೊಂದಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇವರು ಶಂಕರಾಚಾರ್ಯರ ಬಗ್ಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಸಂಘದ ಪದಾಧಿಕಾರಿಗಳಲ್ಲದೆ ಜ್ಞಾನ ಭಾರತಿಯ ಸದಸ್ಯರೂ ಹಾಜರಿದ್ದರು.

ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ವತಿಯಿಂದ ಶಾರದಾ ದೇವಸ್ಥಾನದಲ್ಲಿ ತಾ.8-5-2011ರಂದು ಜಗದೀಶ ಉಪಾಧ್ಯಾಯ ಪಾವಂಜೆ ಇವರಿಂದ ಶ್ರೀ ಶಂಕರಾಚಾರ್ಯರ ಬಗ್ಗೆ ಪೂರ್ವಾಹ್ನ 11 ಗಂಟೆಯಿಂದ ಉಪನ್ಯಾಸ ಕಾರ್ಯಕ್ರಮ ಜರಗಿತು. ಶ್ರೀ ಶಾರದಾ ಪೀಠ ಶೃಂಗೇರಿ ಇಲ್ಲಿಂದ ಶ್ರೀಗುರುಗಳ ಮಂತ್ರಾಕ್ಷತೆಯೊಂದಿಗೆ ಕಳುಹಿಸಿದ ಸ್ಮರಣಿಕೆಯನ್ನು ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಪ್ರವಚನಕಾರರಿಗೆ ನೀಡಿ ಗೌರವಿಸಿದರು. ಶಂಕರ ಜಯಂತಿಯ ಪ್ರಯುಕ್ತ ಜ್ಞಾನಮಂದಿರದಲ್ಲಿ ಸಮಾಜ ಬಾಂಧವರಿಗೆ ಭೋಜನ ವ್ಯವಸ್ಥೆ ಮಾಡಲಾಗಿತ್ತು.

ತಾ.10-5-2011ರಂದು ಸಂಜೆ 5 ಗಂಟೆಯಿಂದ ಜ್ಞಾನ ಭಾರತಿಯ ಸಹಯೋಗದೊಂದಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಉಪ್ಪುಂದ ಚಂದ್ರಶೇಖರ ಹೊಳ್ಳರಿಂದ ಶ್ರೀ ಶಂಕರಾಚಾರ್ಯರ ಬಗ್ಗೆ ಪ್ರವಚನ ನಡೆಯಿತು. ಅದೇ ದಿನ ಸ್ಪರ್ಧಾ ವಿಜೇತರಿಗೆ ಬಹುಮಾನ ಮತ್ತು ತೀರ್ಪುಗಾರರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಸಂಜೆ 6-30ರಿಂದ ತೀರ್ಥಹಳ್ಳಿ ರಾಜರಾಜೇಶ್ವರಿ ನೃತ್ಯ ಮಂಡಳಿಯವರಿಂದ ಶ್ರೀ ಶಂಕರ ವಿಜಯ ನೃತ್ಯರೂಪಕ ನಡೆಯಿತು.

## ಕಲೆಗಳಿಂದ ವ್ಯಕ್ತಿತ್ವ ವಿಕಸನ : ಪತ್ತರ್

ಕಲೆಗಳಿಂದ ವ್ಯಕ್ತಿತ್ವ ವಿಕಸನವಾಗುತ್ತದೆ. ಕಲೆಗಳು ಬೆಳೆದಷ್ಟು ಮಾನವನ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳು ಹೆಚ್ಚುತ್ತದೆ ಎಂದು ಮಂಗಳೂರು ಮಹಾಲಸಾ ಸ್ಕೂಲ್ ಆಫ್ ಆರ್ಟ್‌ನ ಮುಖ್ಯಸ್ಥ ಶ್ರೀ ಎನ್.ಎಸ್.ಪತ್ತರ್ ಹೇಳಿದರು.

ತಾ.08-05-2011 ರವಿವಾರ (ಶಂಕರ ಜಯಂತಿಯಂದು) ಶಾರದಾ ಕಲ್ಯಾಣ ಮಂಟಪದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಫೋಕ್ ಆ್ಯಂಡ್ ಟ್ರೈಬಲ್ ಆರ್ಟ್, ಉಡುಪಿ ಘಟಕ ಆಯೋಜಿಸಿದ್ದ ಕಲಾ ಪ್ರದರ್ಶನದಲ್ಲಿ ಮಾತನಾಡಿದರು.

(4ನೇ ಪುಟಕ್ಕೆ....)

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ವತಿಯಿಂದ ಶ್ರೀಶಂಕರ ಜಯಂತಿ ಆಚರಣೆ



ಚಿತ್ರ : ಶ್ರೀ ರಘುವೀರ್, ಪೆರ್ಡೂರು

ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ತಾ.14-05-2011ರ ಶನಿವಾರದಂದು ‘ಸದನ’ ದಲ್ಲಿ ಶ್ರೀ ಶಂಕರ ಜಯಂತಿಯನ್ನು ಭಕ್ತಿ ಶ್ರದ್ಧೆಯಿಂದ ಆಚರಿಸಲಾಯಿತು. ಮಕ್ಕಳಿಂದ ಶ್ರೀ ಶಂಕರ ಸ್ತೋತ್ರ ಪಠಣ, ಸಾಮೂಹಿಕ ಲಲಿತಾ ಸಹಸ್ರನಾಮ ಪಠಣದ ಬಳಿಕ ಶ್ರೀಯುತ ರಘುರಾಮ ಶರ್ಮರು ಶ್ರೀ ಶಂಕರರ ತತ್ವಾದರ್ಶಗಳ ಬಗ್ಗೆ ಧಾರ್ಮಿಕ ಉಪನ್ಯಾಸ ನೀಡಿದರು. ಶ್ರೀಯುತ ಕರುಣಾರಾವ್ ಬೆಳ್ಳೆಯವರು ಸ್ವಾಗತಿಸಿ, ಶ್ರೀ ಪಿ.ಶ್ರೀಕಾಂತರಾವ್‌ರವರು ವಂದಿಸಿದರು. ನಂತರ ಮಂಗಳಾರತಿ, ಪ್ರಸಾದ ವಿತರಣೆ ಹಾಗೂ ಪ್ರಸಾದ ಭೋಜನವನ್ನು ನೀಡಲಾಯಿತು.

ವರದಿ : **ಪಿ.ಶ್ರೀಕಾಂತ ರಾವ್**

## ಮೂಡಬಿದ್ರೆ : ರಾಜ್ಯಕ್ಕೆ ದ್ವಿತೀಯ ಸ್ಥಾನಿ ಕು। ಅನುಜ್ಞ ಕೆ. ಇವರಿಗೆ ಸನ್ಮಾನ



ತಾ.14-5-2011ರಂದು ಶಂಕರ ಜಯಂತಿಯ ಪ್ರಯುಕ್ತ ಶ್ರೀ ಆದಿಶಂಕರ ಬ್ರಾಹ್ಮಣ ಪರಿಷತ್ತಿನ ವತಿಯಿಂದ ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 619 ಅಂಕ ಗಳಿಸುವ ಮೂಲಕ ರಾಜ್ಯದಲ್ಲಿ ದ್ವಿತೀಯ ಸ್ಥಾನ ಪಡೆದಿರುವ ಮೂಡಬಿದಿರೆಯ ರೋಟರಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಕು। ಅನುಜ್ಞ ಕೆ. ಇವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಈಕೆ ಕೂಡ್ಲು ಶ್ಯಾಮ್ ಪ್ರಸಾದ್ ಶ್ಯಾನುಭೋಗ್ ಹಾಗೂ ಶ್ರೀಮತಿ ಜ್ಯೋತಿ ಶ್ಯಾನುಭಾಗ್ ದಂಪತಿಗಳ ಸುಪುತ್ರಿ.

ಈ ಕಾರ್ಯಕ್ರಮದಲ್ಲಿ ಪ್ರಧಾನ ಪ್ರವಚನಗಾರರಾಗಿ ಯಕ್ಷಗಾನ ವಿಮರ್ಶಕ ಡಾ। ಎಂ. ಪ್ರಭಾಕರ ಜೋಶಿಯವರು ಮಾತನಾಡಿ ದೇಶವನ್ನು ತಾತ್ವಿಕ ನೆಲೆಯಲ್ಲಿ ಕಲ್ಪಿಸಿಕೊಟ್ಟ ದಾರ್ಶನಿಕ ಶಂಕರಾಚಾರ್ಯರು, ಬ್ರಹ್ಮಸತ್ಯ, ಜಗನ್ಮಿಥ್ಯ, ಬ್ರಹ್ಮ ಚೈತನ್ಯ, ಅದುವೇ ಸತ್ಯ ಎಂದು ಸಾರಿದವರು 8ನೇ ಶತಮಾನದಲ್ಲಿ

(4ನೇ ಪುಟಕ್ಕೆ....)

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಹೀಗೊಂದು ಘಟನೆ. ಬೆಳಗಿನ ಜಾವ 5-30ಕ್ಕೆ ಪ್ರತಿ ದಿನದಂತೆ ನಮ್ಮ ಆಪ್ತರೊಬ್ಬರು ತಮ್ಮ ಮಿತ್ರರೊಂದಿಗೆ ವಾಕಿಂಗ್‌ಗೆ ಹೊರಟಿದ್ದರು. ಸುಮಾರು 6-20ರ ಹೊತ್ತಿಗೆ ಹೈವೇಯಲ್ಲಿ ಲಾರಿಯೊಂದು ಅಪಘಾತಕ್ಕೀಡಾಗಿ ಉರುಳಿ ಬಿತ್ತು. ಪ್ರಖ್ಯಾತ ಹಿಂದುಸ್ತಾನ್ ಲೀವರ್‌ನ ಉತ್ಪಾದನೆಗಳಾದ ಸಾಬೂನು, ಟೂತ್ ಪೇಸ್ಟ್, ಕ್ರೀಮ್, ಸುಗಂಧ ವಸ್ತುಗಳನ್ನೊಳಗೊಂಡ ಟ್ರಕ್ಕಿನ ಅರ್ಧಾಂಶ ಸಾಮಗ್ರಿಗಳು ಲಾರಿಯಿಂದ ಹೊರಗೆ ಸುಮಾರು ಹತ್ತು ಅಡಿ ದೂರದವರೆಗೂ ಚೆಲ್ಲಿದ್ದಿತ್ತು. ಲಾರಿಯ ಚಾಲಕನಿಗೂ ಸಣ್ಣಪುಟ್ಟ ಗಾಯಗಳಾಗಿತ್ತು. ಇದನ್ನೆಲ್ಲಾ ವಾಕಿಂಗ್‌ನಲ್ಲಿದ್ದ ನಮ್ಮ ಆಪ್ತರು ಹಾಗೂ ಅವರ ಮಿತ್ರರು ಕಣ್ಣಾರೆ ಕಂಡು ಲಾರಿಯಿಂದ ಎಸೆಯಲ್ಪಟ್ಟ ಚಾಲಕನನ್ನು ಉಪಚರಿಸಿ, ಕುಳ್ಳಿರಿಸಿದರು.

ಅಷ್ಟು ಹೊತ್ತಿಗಾಗಲೇ ಅಪಘಾತದ ಶಬ್ದ ಕೇಳಿಸಿಕೊಂಡ ಆಸುಪಾಸಿನ ಹತ್ತಾರು ಮನೆಗಳವರು ಬಂದು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಸಾಬೂನು, ಟೂತ್‌ಪೇಸ್ಟ್, ಕ್ರೀಮ್ ಮೊದಲಾದ ವಸ್ತುಗಳನ್ನು ತಮಗೆ ಇಷ್ಟ ಬಂದಂತೆ ಹೆಕ್ಕಿ ಸಂಗ್ರಹಿಸಿ ತಮ್ಮ ಮನೆಯಲ್ಲಿಟ್ಟು ಮನೆಯ ಮಕ್ಕಳೆಲ್ಲರನ್ನೂ ಕರೆದುಕೊಂಡು ಬಂದು ಮತ್ತೆ ಮತ್ತೆ ಸಂಗ್ರಹಿಸಿ ಮನೆಗೆ ಕೊಂಡೊಯ್ದರು. ಗಾಯಾಳು ಚಾಲಕ ಮುಟ್ಟಬೇಡಿರೆಂದು ಬೊಬ್ಬಿಡುತ್ತಿದ್ದರೂ ಅವರು ಬಿಡದೆ ಕೇವಲ 5-8 ನಿಮಿಷದಲ್ಲಿ ಬಿದ್ದ ಸಾಮಗ್ರಿ ಎಲ್ಲಾ ಖಾಲಿ ಮಾಡಿದರು. (ಪುಣ್ಯಕ್ಕೆ ಲಾರಿಯ ಒಳಗಿದ್ದನ್ನು ಮುಟ್ಟಲಿಲ್ಲವೆನ್ನಿ)

ನಮ್ಮ ಆಪ್ತರಾದ ಮಿತ್ರರ ಪ್ರಶ್ನೆ-''ಏನು ಅನಾಗರಿಕ ಜನರಪ್ಪಾ! ನಮ್ಮ ಊರವರು? ನನಗೆ ಹೇಸಿಗೆಯಾಯಿತು. ಇಲ್ಲಿ ಪ್ರಾಮಾಣಿಕತೆ ಎಂಬುದು ಇಲ್ಲವೆ?'' ಎಂದು ನನ್ನಲ್ಲಿ ಹೇಳಿ ಘಟನೆಯನ್ನು ವಿವರಿಸಿದರು.

ಹೌದು ನಮ್ಮಲ್ಲಿ ಈಗ ಪ್ರಾಮಾಣಿಕತೆಯೇ ಕಡಿಮೆಯಾಗಿದೆ. ನಾವೇ ನಮ್ಮ ಮನೆಯಲ್ಲಿ ಮಕ್ಕಳೆದುರಲ್ಲಿ ಇಂತಹ ಅನಾಗರಿಕ ವರ್ತನೆಯನ್ನು ಮಾಡುತ್ತೇವೆ ಮಾತ್ರವಲ್ಲ ಮಕ್ಕಳಿಂದಲೂ ಮಾಡಿಸುತ್ತೇವೆ. ನಮ್ಮ ಮಕ್ಕಳೇ ಮುಂದೆ ಇಂತಹದನ್ನು ಮಾಡಲು ಪ್ರಚೋದಿಸುತ್ತೇವೆ. ಹಾಗಾಗಿ ಜನಸಾಮಾನ್ಯರಿಂದ ಹಿಡಿದು ದೊಡ್ಡ ಅಧಿಕಾರಿಗಳವರೆಗೂ ಜನರು ಈ ಪ್ರಾಮಾಣಿಕತೆಯನ್ನು ಮರೆತು ತಮ್ಮ ಜೀವನ ನಡೆಸುತ್ತಾರೆ. ರಾಜಕಾರಣಿಗಳು, ಮಂತ್ರಿಗಳು ಈ ಪ್ರಾಮಾಣಿಕತೆ ಎಂಬ ಪದವನ್ನೇ ಮರೆತಂತೆ ವರ್ತಿಸುತ್ತಿರುವ ಹಲವಾರು ಘಟನೆಗಳನ್ನು ಮಾಧ್ಯಮಗಳ ಮೂಲಕ ತಿಳಿಯುತ್ತೇವೆ. ಮುಂದೊಂದು ದಿನ ನನ್ನ ಈ ವರ್ತನೆಯಿಂದ ತಾನು ಸಿಕ್ಕಿಬೀಳಬಹುದು, ನನಗೆ ಶಿಕ್ಷೆಯಾಗಬಹುದು, ನನ್ನನ್ನು ನಂಬಿದ ನನ್ನ ಹೆಂಡತಿ ಮಕ್ಕಳು, ಮನೆಯವರು ಮುಜುಗರಕ್ಕೊಳಗಾಗುತ್ತಾರೆ ಎಂಬ ಭಾವನೆಯೂ ಈ ಜನಕ್ಕೆ ಇದ್ದಂತೆ ತೋರುವುದಿಲ್ಲ. ಅದೆಷ್ಟೋ ರಾಜಕಾರಣಿಗಳು ಜೈಲಿನಲ್ಲಿರುವುದು ಈ ಕಾರಣದಿಂದಲೇ ಅಲ್ಲವೇ?

ಆದ್ದರಿಂದ ನಮ್ಮ ಮುಂದಿನ ಪೀಳಿಗೆಗೆ ಪ್ರಾಮಾಣಿಕ ವರ್ತನೆಯನ್ನು ಕಲಿಸಿ, ನಾಗರಿಕ ಪ್ರಜೆಗಳಾಗುವಂತೆ ನಿರ್ಮಿಸುವುದು ಉತ್ತಮವಲ್ಲವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಅಲ್ಲದೆ ಬಂಧುಹತ್ಯೆಯನ್ನು ತಪ್ಪಿಸುವುದಕ್ಕಾಗಿ ಒಂದು ಉಪಾಯವನ್ನು ಸೂಚಿಸಿದ್ದಳು. ವಿವಾಹ ಪೂರ್ವದಿನ ವಧುವು ಗಿರಿಜಾ ಮಂದಿರಕ್ಕೆ ಹೋಗುವ ಸಂಪ್ರದಾಯವಿರುವುದರಿಂದ ಅಲ್ಲಿಂದಲೇ ಅವಳನ್ನು ಅಪಹರಿಸಬಹುದೆಂಬುದೇ ಆ ಉಪಾಯ.

ಈ ಸಂದೇಶವನ್ನು ಕೇಳಿದ ಕೇಶವನು ತಾನೂ ರುಕ್ಮಿಣಿಯನ್ನು ಪ್ರೀತಿಸುವುದಾಗಿಯೂ, ಅವಳು ಹೇಳಿದ ಉಪಾಯದಂತೆ ನಡೆದುಕೊಳ್ಳುವುದಾಗಿಯೂ ಆಶ್ವಾಸನೆಯನ್ನಿತ್ತು ಬ್ರಾಹ್ಮಣನನ್ನು ವಿದರ್ಭಕ್ಕೆ ಬೀಳ್ಕೊಟ್ಟನು.

ವಿದರ್ಭದ ರಾಜಧಾನಿಯಾದ ಕುಂಡಿನಪುರವು ರುಕ್ಮಿಣಿಯ ವಿವಾಹೋತ್ಸವಕ್ಕೆ ಸಜ್ಜಾಯಿತು. ಇಡಿ ರಾಜಧಾನಿ ಸಿಂಗಾರಗೊಂಡಿತು. ಹಿರಿಯ ಮಗನಾದ ರುಕ್ಮಿಯ ಮೇಲಿನ ಮೋಹದಿಂದ ಭೀಷ್ಮಕನು ಅವನಿಷ್ಟದಂತೆ ವಿವಾಹ ಸಿದ್ಧತೆಗಳನ್ನು ಮಾಡಿದನು.

ನಿಯಮಾನುಸಾರ ರುಕ್ಮಿಣಿಗೆ ಮಂಗಳ ಸ್ನಾನ ಮಾಡಿಸಿ, ಬ್ರಾಹ್ಮಣರನ್ನು ಪೂಜಿಸಿ ಅವರಿಂದ ಸ್ವಸ್ತಿ ವಾಚನ ಮಾಡಿಸಿ ಅವರಿಗೆ ಗವಾದಿದಾನಗಳನ್ನಿತ್ತನು. ಇತ್ತ ದಮಘೋಷನೂ ಶಿಶುಪಾಲನಿಗೆ ಮಾಂಗಲಿಕ ಸ್ನಾನಾದಿಗಳನ್ನು ಮಾಡಿಸಿ, ಅವನನ್ನು ವರವೇಷಭೂಷಣಗಳಿಂದ ಅಲಂಕರಿಸಿ, ಆನೆ, ಕುದುರೆಗಳ ಸೈನ್ಯದೊಂದಿಗೆ ಕುಂಡಿನಪುರಕ್ಕೆ ಬಂದನು. ಭೀಷ್ಮಕನು ಅವರನ್ನು ರಾಜೋಚಿತವಾಗಿ ಸ್ವಾಗತಿಸಿ ಅವರಿಗಾಗಿ ಸಿದ್ಧವಾಗಿದ್ದ ಬಿಡಾರಗಳಲ್ಲಿ ಅವರನ್ನು ಇರಿಸಿದನು. ಅಲ್ಲಿಗೆ ಶಾಲ್ವ, ಜರಾಸಂಧ, ದಂತವಕ್ತ್ರ, ವಿದೂರಥ, ಪೌಂಡ್ರಕ ಮೊದಲಾದ ಸಾವಿರಾರು ಚೈದ್ಯ ಪಕ್ಷದ ರಾಜರೂ ಬಂದಿದ್ದರು. ಅವರೆಲ್ಲರಿಗೂ ರಾಮ, ಕೃಷ್ಣರು ಯಾದವರೊಡಗೂಡಿ ಬಂದು ಮದುವೆಗೆ ಅಡ್ಡಿಪಡಿಸಬಹುದೆಂಬ ಸಂಶಯವಿದ್ದುದರಿಂದ ತಂತಮ್ಮ ಸೈನ್ಯಗಳನ್ನು ತಂದಿದ್ದರು.

ಇತ್ತ ಶ್ರೀಕೃಷ್ಣನು ಏಕಾಕಿಯಾಗಿ ರುಕ್ಮಿಣೀ ಹರಣಕ್ಕೆ ಹೋಗಿರುವನೆಂದು ತಿಳಿದ ಬಲರಾಮನಿಗೆ ಆತಂಕವಾಯಿತು. ನಿಜಕ್ಕೂ ಅಲ್ಲಿ ಬಹಳ ದೊಡ್ಡ ಯುದ್ಧವಾಗುವ ಸಂಭವವಿರುವುದನ್ನು ಮನಗಂಡ ಬಲರಾಮನು ಚತುರಂಗ ಬಲ ಸಮೇತವನಾಗಿ ವಿದರ್ಭಕ್ಕೆ ಪ್ರಯಾಣ ಬೆಳೆಸಿದನು.

ವಿದರ್ಭಕ್ಕೆ ಹೋದ ಬ್ರಾಹ್ಮಣನು ಇನ್ನೂ ಬಂದಿಲ್ಲವೆಂದು ರುಕ್ಮಿಣಿ ಆಶಂಕೆಯಿಂದ ದುಃಖಿತಳಾದಳು. ಅಷ್ಟರಲ್ಲಿ ಬ್ರಾಹ್ಮಣನು ಬಂದು ಶ್ರೀಕೃಷ್ಣನ ಆಗಮನವನ್ನು ಆಕೆಗೆ ತಿಳಿಸಿದನು. ಅವಳಿಗೆ ಅತ್ಯಾನಂದವಾಯಿತು. ರಾಮ, ಕೃಷ್ಣರ ಆಗಮನವನ್ನು ಅರಿತ ಭೀಷ್ಮಕನು ಅವರನ್ನು ಯಥಾಯೋಗ್ಯವಾಗಿ ಸಮ್ಮಾನಿಸಿದನು. ಹಾಗೇ ಅವರಿಗೂ ಬಿಡಾರವಾಸಕ್ಕೆ ಏರ್ಪಾಡು ಮಾಡಿದನು.

ವಧುವಾದ ರುಕ್ಮಿಣಿಯು ರಾಜಭಟರ ರಕ್ಷಣೆಯಲ್ಲಿ ಪೂಜೆಗಾಗಿ ಅಂಬಿಕೆಯ ದೇಗುಲಕ್ಕೆ ಹೋದಳು. ಅಲ್ಲಿ ಭಕ್ತಿಯಿಂದ ಭವಾನಿಯನ್ನೂ, ಶಿವನನ್ನೂ ಅರ್ಚಿಸಿ ತನ್ನ ಮನಸ್ಸಿನ ಪ್ರಾರ್ಥನೆಯನ್ನು ನಿವೇದಿಸಿಕೊಂಡಳು. ಅಲ್ಲಿಂದ ಹೊರಟು ಈಚೆಗೆ ಬಂದಾಗ ಅಲ್ಲಿ ಶ್ರೀಕೃಷ್ಣನು ರಥಸಹಿತ ಸಿದ್ಧನಾಗಿ ನಿಂತಿದ್ದನು. ಎಲ್ಲ ರಾಜರು ನೋಡುತಿದ್ದಂತೆ ಅವಳು ರಥವನ್ನೇರಿ ಕುಳಿತಳು. ರಾಮ, ಕೃಷ್ಣರು ಅಲ್ಲಿಂದ ಹೊರಟರು. ಆಗ ಅಲ್ಲಿದ್ದ ರಾಜರು ಕ್ರೋಧಾವೇಶದಿಂದ ಯುದ್ಧಕ್ಕೆ ಬಂದರು. ಬಲರಾಮನ ಸೈನ್ಯಕ್ಕೂ ಇತರ ರಾಜರ ಸೈನ್ಯಕ್ಕೂ ಘೋರ ಕದನವೇರ್ಪಟ್ಟಿತು. ಶತ್ರು ಸೈನ್ಯ ಧ್ವಂಸವಾಯಿತು. ಜರಾಸಂಧ ಮೊದಲಾದ ರಾಜರು ಪ್ರಾಣಗಳನ್ನು ಕೈಯಲ್ಲಿ ಹಿಡಿದುಕೊಂಡು ಓಡಿ ಹೋದರು.

ರುಕ್ಮಿಣಿಯು ಕೈತಪ್ಪಿಹೋದುದರಿಂದ ಶಿಶುಪಾಲನು ಅತ್ಯಂತ ದುಃಖಿತನಾದನು. ಆಗ ಜರಾಸಂಧನು ಅವನನ್ನು ಸಮಾಧಾನ ಪಡಿಸಿದನು. ''ಜೀವನದಲ್ಲಿ ಸೋಲು-ಗೆಲುವುಗಳು ಬರುತ್ತಿರುತ್ತವೆ. ಅದಕ್ಕಾಗಿ ಅತಿ ದುಃಖವನ್ನಾಗಲೀ, ಅತಿ ಹರ್ಷವನ್ನಾಗಲೀ ಪಡಬಾರದು. ಕೃಷ್ಣನಿಂದ ಹದಿನೇಳು ಸಲ ಸೋತ ನಾನು ಹದಿನೆಂಟನೆಯ ಸಲ ಗೆಲ್ಲಲಿಲ್ಲವೇ? ಎಂದಿಗೂ ಉತ್ಸಾಹವನ್ನು ಕಳೆದುಕೊಳ್ಳಬಾರದು. ಯಾಕೆಂದರೆ ಉತ್ಸಾಹವೇ ನಮ್ಮ ಬಲ'' ಎಂದನು. ಇಂತಹ ಸಾಂತ್ವನದ ಮಾತುಗಳಿಂದ ಶಿಶುಪಾಲನು ಸಮಾಧಾನಗೊಂಡನು.

ರುಕ್ಮಿಗೆ ಮನಃ ಶಾಂತಿಯಿರಲಿಲ್ಲ. ತನ್ನಿಷ್ಟದಂತೆ ತಂಗಿಯಾದ ರುಕ್ಮಿಣಿಯ ಮದುವೆ ತನ್ನ ಪ್ರಿಯ ಮಿತ್ರನಾದ ಶಿಶುಪಾಲನ ಸಂಗಡವಾಗದ್ದರಿಂದಲೂ, ತಾನು ದ್ವೇಷಿಸುತ್ತಿದ್ದ ಕೃಷ್ಣ ಅವಳನ್ನು ಅಪಹರಿಸಿದ್ದರಿಂದಲೂ ಅವನು ಹತಾಶೆ, ಕೋಪಗಳಿಂದ ಉರಿದುಹೋದನು. ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಕೃಷ್ಣನನ್ನು ಬೆನ್ನಟ್ಟಿದನು. ತಾನು ಕೃಷ್ಣನನ್ನು ಕೊಲ್ಲದೆ ಕುಂಡಿನಪುರಕ್ಕೆ ಹಿಂತಿರುಗುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದನು. ಅಂತು ಕೃಷ್ಣನ ಸೈನ್ಯಕ್ಕೂ, ರುಕ್ಮಿಯ ಸೈನ್ಯಕ್ಕೂ ಯುದ್ಧ ನಡೆಯಿತು. ಕೊನೆಗೆ ರುಕ್ಮಿಯ ಸೈನ್ಯ ಸೋತು ಹೋಯಿತು. ರುಕ್ಮಿ ಕೃಷ್ಣನಿಗೆ ಸೆರೆಸಿಕ್ಕನು. ಕೃಷ್ಣನು ಖಡ್ಗದಿಂದ ಅವನ ತಲೆಯನ್ನು ಕಡಿಯಲು ಮುಂದಾದನು. ಆಗ ರುಕ್ಮಿಣಿಯು ಕೃಷ್ಣನ ಕಾಲಿಗೆ ಬಿದ್ದು ತನ್ನ ಅಣ್ಣನನ್ನು ಉಳಿಸಬೇಕೆಂದು ಬೇಡಿಕೊಂಡಳು. ಆಗ ಕೃಷ್ಣನು ಅವನ ತಲೆ, ಗಡ್ಡ, ಮೀಸೆಗಳನ್ನು ಅಲ್ಲಲ್ಲಿ ಬೋಳಿಸಿದನು. ಇದನ್ನು ಬಲರಾಮನು ಆಕ್ಷೇಪಿಸಿ, ವೀರರಿಗೆ ಆ ರೀತಿ ಅವಮಾನಿಸುವುದು ಪರಾಕ್ರಮವಲ್ಲವೆಂದನು. ಕೃಷ್ಣನು ರುಕ್ಮಿಯನ್ನು ಬಂಧನದಿಂದ ಬಿಡುಗಡೆಗೊಳಿಸಿದನು. ರುಕ್ಮಿಯು ತನ್ನ ಪ್ರತಿಜ್ಞೆಯಿಂತೆ ಕುಂಡಿನಪುರಕ್ಕೆ ಹೋಗಲಿಲ್ಲ. ಭೋಜಕಟವೆಂಬ ಒಂದು ನಗರವನ್ನು ನಿರ್ಮಿಸಿ ಅಲ್ಲಿ ಹೋಗಿ ನೆಲೆನಿಂತನು. ಇತ್ತ ದ್ವಾರಕೆಯಲ್ಲಿ ರುಕ್ಮಿಣೀ-ಕೃಷ್ಣರ ವಿವಾಹ ಬಹು ವಿಜೃಂಭಣೆಯಿಂದ ನೆರವೇರಿತು.

### ೧೪

ಶ್ರೀಮನ್ನಾರಾಯಣನ ಅಂಶವೇ ಆಗಿದ್ದ ಕಾಮನು ಶಿವನ ಕ್ರೋಧಾಗ್ನಿಯಲ್ಲಿ ಸುಟ್ಟುಹೋದ ಮೇಲೆ ಪುನಃ ವಿಷ್ಣುವನ್ನೇ ಹೋಗಿ ಸೇರಿಕೊಂಡನು. ಅವನೇ ಮತ್ತೆ ರುಕ್ಮಿಣಿಯಲ್ಲಿ ಕೃಷ್ಣನಿಗೆ ಮಗನಾಗಿ ಹುಟ್ಟಿದನು. ಅವನಿಗೆ ಪ್ರದ್ಯುಮ್ನನೆಂದು ನಾಮಕರಣವಾಯಿತು. ಆ ಕಾಲದಲ್ಲಿದ್ದ ಶಂಬರನೆಂಬ ಅಸುರನು ಪ್ರದ್ಯುಮ್ನನು ತನ್ನ ಶತ್ರುವೆಂದು ತಿಳಿದು, ಕಾಮರೂಪಿಯಾದ ಅವನು ಸೂತಿಕಾ ಗೃಹಕ್ಕೆ ಹೋಗಿ ಆ ಪುಟ್ಟ ಮಗುವನ್ನು ಅಪಹರಿಸಿಕೊಂಡು ಹೋದನು. ಮಗುವನ್ನು ಸಮುದ್ರಕ್ಕೆಸೆದನು.

ಆ ಶಿಶುವನ್ನು ಒಂದು ದೊಡ್ಡ ಮೀನು ನುಂಗಿತು. ಆ ಮೀನು ಬೆಸರ ಬಲೆಗೆ ಬಿದ್ದಿತು. ಆ ದೊಡ್ಡ ಮೀನನ್ನು ಬೆಸ್ತರು ಶಂಬರಾಸುರನಿಗೆ ಕಾಣಿಕೆಯಾಗಿ ಕೊಟ್ಟರು. ಅವನ ಅಡುಗೆಯವರು ಅದನ್ನು ಕತ್ತರಿಸಲಾರಂಭಿಸಿದರು. ಆಗ ಅದರ ಹೊಟ್ಟೆಯಲ್ಲಿ ಮಗು ಸಿಕ್ಕಿತು. ಅವರು ಅದನ್ನು ಮಾಯಾವತಿ ಎಂಬ ಅಡುಗೆಯ ಹೆಂಗಸಿಗೆ ಒಪ್ಪಿಸಿದರು. ಅವಳು ಸಂಶಯಪಡುತ್ತಿರಲು ನಾರದರು ಬಂದು ನಿಜ ವೃತ್ತಾಂತವನ್ನು ತಿಳಿಸಿದರು. ಆ ಮಾಯಾವತಿ ಕಾಮನ ಹೆಂಡತಿ ರತಿಯೇ ಆಗಿದ್ದಳು. ಅನಂಗನಾದ ಕಾಮನು ಮರಳಿ ಹುಟ್ಟಿ ಬರಬಹುದೆಂದು ನಿರೀಕ್ಷಿಸುತ್ತಿದ್ದಳು. ಪ್ರದ್ಯುಮ್ನನು ತನ್ನ ಪತಿಯೆಂಬುದನ್ನು ತಿಳಿದ ಮಾಯಾವತಿಯು ಅವನನ್ನು ಅನನ್ಯ ಪ್ರೇಮದಿಂದ ಸಾಕಿದಳು. ಪ್ರದ್ಯುಮ್ನನು ಬೆಳೆದು ಯುವಕನಾದನು. ಅವನ ಅಪೂರ್ವ ರೂಪಲಾವಣ್ಯಗಳು ಎಲ್ಲ ಸ್ತ್ರೀಯರ ಮನಸ್ಸನ್ನು ಅಪಹರಿಸುವಂತಿದ್ದವು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಯೋಜನಾನಾಂ ಸಹಸ್ರಂ ತು ಶನೈರ್ಗಚ್ಛತಿ ಪಿಪೀಲಿಕಾ ।**
**ಅಗಚ್ಛನ್ ವೈನತೇಯೋಽಪಿ ಪದಮೇಕರ ನ ಗಚ್ಛತಿ ॥**

ಅಂದರೆ ಇರುವೆ ತನ್ನ ಸಣ್ಣ ಸಣ್ಣ ಕಾಲುಗಳಿಂದ ಮೆಲ್ಲ ಮೆಲ್ಲಗೆ ನಡೆಯುತ್ತ ಮುನ್ನಡೆಯುತ್ತ ಸಾವಿರಾರು ಮೈಲು ಸಾಗಬಲ್ಲದು. ಮುನ್ನಡೆಯುವ ಮನಸ್ಸು ಮಾಡದಿದ್ದರೆ ಪಕ್ಷಿಯೂ ಕೂಡಾ (ದೊಡ್ಡ ದೊಡ್ಡ ರೆಕ್ಕೆಗಳುಳ್ಳ ಗರುಡ) ಒಂದು ಹೆಜ್ಜೆಯೂ ಮುನ್ನಡೆಯಲಾರದು.

**ಪುಸಕ ಪರಿಚಯ :**
**ನಂದೆಳಿಕೆ ಐ'ಸಿರಿ' ದರ್ಶನ**

*ಸಂಪಾದಕರು :* **ಕೆ. ಎಲ್. ಕುಂಡಂತಾಯ**
**ನಂದಳಿಕೆ ಬಾಲಚಂದ್ರ ರಾವ್**

ನಂದಳಿಕೆ ಐಸಿರಿ ದರ್ಶನ ಎಂಬ ಈ ಕೃತಿಯ ಒಂದು ಲೇಖನ 'ಭೂತ ಕಾಲ'ದಲ್ಲಿ ಡಾ। ನಂದಳಿಕೆ ವಾಸುದೇವ ರಾವ್ ಮತ್ತು ನಂದಳಿಕೆ ಬಾಲಚಂದ್ರ ರಾವ್ ಹೀಗೆ ಹೇಳುತ್ತಾರೆ : ನಂದಳಿಕೆ ಎಲ್ಲಿದೆ? ಹೇಗಿದೆ? ಕನ್ನಡ ಬಲ್ಲವರಲ್ಲಿ ನಂದಳಿಕೆಯ ಹೆಸರು ಕೇಳದವರಿಲ್ಲ. ಸಾಹಿತ್ಯಿಕವಾಗಿ, ಕನ್ನಡ ನಾಡಲ್ಲಿ ಜನಜನಿತವಾಗಿರುವ 'ಕನ್ನಡಂ ಕತ್ತುರಿಯಲ್ತೆ' ಎಂಬ ಕನ್ನಡ ಭಾಷಾಭಿಮಾನದ ನುಡಿ ನುಡಿದು, ಕನ್ನಡಕ್ಕಾಗಿ ಎಡೆಬಿಡದೆ ದುಡಿದು, ಕನ್ನಡ ತಾಯ ಸೇವೆಯಲ್ಲೇ ಮಡಿದ ವರಕವಿ, ರಸಿಕ ಶಿಖಾಮಣಿ ಮುದ್ದಣ ಹುಟ್ಟಿ ಬೆಳೆದ ಹಿರಿಮೆಯ ನೆಲವಿದೆಂದು ಎಲ್ಲರೂ ಬಲ್ಲರು.

ಧಾರ್ಮಿಕವಾಗಿ, ಊರಪರವೂರ ಆರಾಧ್ಯ ದೇವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಶ್ರೀ ಬ್ರಹ್ಮ, ಗಣಪತಿ, ಅಬ್ಬಗದಾರಗ, ಅಣ್ಣಪ್ಪ ಸ್ವಾಮಿ ಸಾನ್ನಿಧ್ಯದ, ನಾಲ್ಕು ಸ್ಥಾನದ ಈ ಕ್ಷೇತ್ರ ಮಹಿಮೆಯನ್ನು ಎಲ್ಲರೂ ಅರಿತಿಲ್ಲ. ನಂದಳಿಕೆ ಎಲ್ಲಿದೆ? ಹೇಗಿದೆ? ಅಲ್ಲಿ ಏನಿದೆ? ಎಂದು ಹಲವರು ತಿಳಿಯರು. ಇವೆಲ್ಲವನ್ನು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನವಿದು.

'ನಂದಳಿಕೆ : ಪ್ರಾಚೀನ ಉಲ್ಲೇಖಗಳು' ಎಂಬ ಲೇಖನದಲ್ಲಿ ಪು.ಶ್ರೀನಿವಾಸ ಭಟ್ಟ ಕಟೀಲು ಹೀಗೆ ಹೇಳುತ್ತಾರೆ-ನಂದಳಿಕೆ ಚಾವಡಿಯ ಅರಸರಿಗೆ ಪೆರ್ಗಡೆ (ಹೆಗ್ಗಡೆ)ಯೆಂದು ಪಟ್ಟದ ಹೆಸರು ಇರುತದೆ. ನಮ್ಮ ಪೂರ್ವಿಕರು ನೀರಿನ ಹರಿವುಗಳಲ್ಲಿ ಸ್ವಯಂ ಸಾನ್ನಿಧ್ಯವನ್ನು ಕಂಡುಕೊಂಡಿದ್ದರು. ಮನೆ, ದೇವಾಲಯ, ನಾಗಬನಗಳ ನಿರ್ಮಾಣ ಕಾಲದಲ್ಲಿ ಈ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುತ್ತಿದ್ದರೆಂದು ಅಧ್ಯಯನದಿಂದ ತಿಳಿದುಬರುತದೆ. ನಂದಳಿಕೆ ದೇವಸ್ಥಾನ ಮತ್ತು ಚಾವಡಿಯ ಮುಂಭಾಗದಲ್ಲಿ ಒಂದು ಪುಟ್ಟ ತೊರೆ ಪ್ರವಹಿಸುತ್ತಿದೆ. ಹಿಂದೆ ಇದು ಸದಾಕಾಲ ಜಲಭರಿತವಾಗಿರಬಹುದೆಂದು ನೆನೆಯಬಹುದು. ಚಾವಡಿ ಅರಮನೆಗೆ ಏರಿಬರುವ ಮೆಟ್ಟಲುಗಳು ಸತ್ಯಪ್ರಮಾಣ ಮಾಡುವ ಪವಿತ್ರ ಸ್ಥಳವೆಂಬ ನಂಬಿಕೆಯಿದೆ. ಚಾವಡಿಯವರಿಗೆ ಮಂತ್ರಿಸ್ಥಾನದಲ್ಲಿದ್ದು ಸಹಕರಿಸುತಿದ್ದವರು ನಂದಳಿಕೆ ಮೂಡುಮನೆಯವರು. ತುಳುನಾಡಿನ ಬಹ್ವಂಶ ಅರಸರಿಗೆ, ಸಲಹೆ ಸೂಚನೆ ಕೊಡುವ ಸ್ಥಾನಮಾನದಲ್ಲಿದ್ದವರು ಶಿವಬ್ರಾಹ್ಮಣರೆಂಬುದು ಗಮನಾರ್ಹ ಅಂಶ.

'ಸಿರಿಪರಿವಾರದೊಂದಿಗೆ ಮಹಾದೇವನಿಗೆ ಮಹೋತ್ಸವ' ಎಂಬ ಲೇಖನದಲ್ಲಿ ಕೆ.ಎಲ್. ಕುಂಡಂತಾಯ ಹೀಗೆ ತಿಳಿಸುತ್ತಾರೆ-ದೇವರ ಸನ್ನಿಧಿಯಲ್ಲಿ ಬ್ರಹ್ಮದರ್ಶನ, ಕೆದಿಂಜೆ ಮೂಲಸ್ಥಾನ, ಮುಜಿಲೊಟ್ಟು ಶ್ರೀ ಉರಿಬ್ರಹ್ಮ ದೇವರ ಸನ್ನಿಧಿಗೆ ಬ್ರಹ್ಮದೇವರ ರಜತ ಪಾದುಕೆ ಹಾಗೂ ಅಬ್ಬಗ-ದಾರಗರ ರಜತ 'ಚೆನ್ನೆಮಣೆ'ಗಳ ಮೆರವಣಿಗೆ, ಮಹಾಸಂತರ್ಪಣೆ, ಸಿರಿಜಾತ್ರೆ, ಪುರಾತನವಾದರೂ ಪುನರ್ ನಿರ್ಮಿತ ನವೀಕೃತ ನಡೆ ದೇಗುಲದಲ್ಲಿ ಮಹಾಲಿಂಗೇಶ್ವರ ದೇವರಿಗೆ ರಥೋತ್ಸವ, ಅವಭೃತ ಇವುಗಳೆಲ್ಲ ನಂದಳಿಕೆಯ ಮಹೋತ್ಸವದ ವಿಶೇಷ ಪರ್ವಗಳು.

ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರರಾದ ಎನ್. ಸುಂದರರಾಮ ಹೆಗ್ಡೆ ಅವರು ಕೃತಿಯ ಹಿನ್ನುಡಿಯಲ್ಲಿ ತಿಳಿಸುತ್ತಾರೆ - ಪ್ರಸಿದ್ಧ ಇತಿಹಾಸ ಸಂಶೋಧಕ ಶ್ರೀ ಕೆ.ಎಲ್.ಕುಂಡಂತಾಯ ಹಾಗೂ ನಂದಳಿಕೆಯಲ್ಲಿ ಹುಟ್ಟಿ ಬೆಳೆದ ನಂದಳಿಕೆ ಬಾಲಚಂದ್ರ ರಾವ್ ಅವರು ಅಧ್ಯಯನ ನಡೆಸಿ ಸಂಗ್ರಹಯೋಗ್ಯ ನಂದಳಿಕೆಯ ಐಸಿರಿ ದರ್ಶನ ಸಂಪಾದಿಸಿದ ಈ ಕೃತಿ ಸಾಹಿತ್ಯ, ಸಂಶೋಧನಾಸಕ್ತರಿಗೆ ಹಾಗೂ ಪ್ರವಾಸಿಗರಿಗೆ ವಿಶೇಷ ಮಾರ್ಗದರ್ಶಿಯಾಗಿದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ.

## ''ವೈವಾಹಿಕ ರಜತ ಸಂಭ್ರಮ''



**ಶ್ರೀ ಕೆ. ಉಮೇಶ್ ರಾವ್ ಮತ್ತು**
**ಶ್ರೀಮತಿ ಪ್ರಜ್ವಲಾ ಯು.ರಾವ್ ಕುಡಾಲ್, ಮಹಾರಾಷ್ಟ್ರ**

ಇವರ ವೈವಾಹಿಕ ಜೀವನದ ಇಪ್ಪತ್ತೈದು ಸಂವತ್ಸರಗಳನ್ನು
ಪೂರ್ತಿಗೊಳಿಸಿದ ಈ ಶುಭ ಸಂದರ್ಭದಲ್ಲಿ ಹಾರ್ದಿಕ ಶುಭಾಶಯಗಳು

**ಡಾ| ಅವಿನಾಶ್ ರಾವ್ (ಪುತ್ರ)**
**ಕು| ಅನುಷ ರಾವ್ (ಪುತ್ರಿ)**
**ಹಾಗೂ ಬಂಧುಬಾಂಧವರು**

## ''ಯುರೋಪ್ ಪ್ರವಾಸ''



ಅಂಬಲಪಾಡಿ ಉಡುಪಿಯಲ್ಲಿರುವ ಶ್ರೀ ಎಚ್. ನಿತ್ಯಾನಂದ ಶಾನುಭೋಗ್ ಮತ್ತು ಶ್ರೀಮತಿ ಮಹಾಲಕ್ಷ್ಮಿ ಶಾನುಭೋಗ್ ಇವರು ಜುಲೈ 4ರಂದು ಬೆಂಗಳೂರಿನಿಂದ ಲಂಡನ್, ಜರ್ಮನಿ, ಪ್ಯಾರಿಸ್, ಸ್ವಿಜರ್ಲೆಂಡ್, ಇಟೆಲಿ, ಆಸ್ಟ್ರಿಯಾ, ಬೆಲ್ಜಿಯಂ, ವೆಟಿಕನ್, ನೆದರ್‌ಲ್ಯಾಂಡ್ ದೇಶಗಳ ಪ್ರವಾಸಕ್ಕೆ ತೆರಳಲಿದ್ದಾರೆ.

ಇವರ ಪ್ರವಾಸಕ್ಕೆ ಶುಭ ಕೋರುವ

**ಶ್ರೀ ಕಿರಣ ಶ್ಯಾನುಭೋಗ್ ಮತ್ತು**
**ಶ್ರೀಮತಿ ಅನ್ನಪೂರ್ಣ ಶ್ಯಾನುಭೋಗ್**
**(ಮಗ ಮತ್ತು ಸೊಸೆ)**

**ಶ್ರೀಮತಿ ಕೀರ್ತಿ ಕೆ.ರಾವ್ ಮತ್ತು**
**ಶ್ರೀ ಕಿರಣ ಎಂ.ರಾವ್**
**(ಮಗಳು ಮತ್ತು ಅಳಿಯ)**

**ಹಾಗೂ ಬಂಧುಮಿತ್ರರು**



**ಶ್ರೀ ಕೇದಿಗೆ ಹರ್ಷಕುಮಾರ್**
**ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಮಂಗಳೂರು**

## ಷಷ್ಟ್ಯಬ್ದಪೂರ್ತಿ ಉಗ್ರರಥ ಮಾರ್ಕಂಡೇಯ ಶಾಂತಿ

ಜೀವನದ ಸಾರ್ಥಕ
60 ಸಂವತ್ಸರಗಳನ್ನು ಪೂರ್ಣಗೊಳಿಸಿದ
ನಿಮ್ಮ ಮುಂದಿನ ಭವಿಷ್ಯವು ಇನ್ನೂ ಉಜ್ವಲವಾಗಲಿ
ಎಂದು ಶ್ರೀದೇವರಲ್ಲಿ ಪ್ರಾರ್ಥಿಸುವ ಹಾಗೂ
ತಾ.10-5-2011ರಂದು ನಡೆದ ಕಾರ್ಯಕ್ರಮಕ್ಕೆ ಆಗಮಿಸಿ
ಶುಭ ಹಾರೈಸಿದ ಸರ್ವರಿಗೂ ಕೃತಜ್ಞತೆ ಸಲ್ಲಿಸುತ್ತಾ
ಆಶೀರ್ವಾದ ಬೇಡುವ ಮಕ್ಕಳಾದ

**ಚಿ| ಪ್ರಮೋದ್ ಕುಮಾರ್ ಮತ್ತು ಸ್ವಾತಿ**
**ಪ್ರತಿಭಾ ಭಂಡಿ-ಪ್ರಭಾಕರ ಭಂಡಿ**
**ಕು| ಪ್ರೀತಿಕಾ ರಾವ್**

## ''ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ''-ಜಗದ್ಗುರುಗಳು

(...1ನೇ ಪುಟದಿಂದ)

ಧರ್ಮವನ್ನು ಕರ್ತವ್ಯವೆಂಬಂತೆ ಸ್ವೀಕರಿಸಬೇಕು. ಅಧ್ಯಾಪಕನಾದವನು ಪಾಠವನ್ನು ಹೇಳಬೇಕು. ವಿದ್ಯಾರ್ಥಿಯಾದವನು ಪಾಠವನ್ನು ಕೇಳಬೇಕು. ಇಂದು ಇವರಿಬ್ಬರೂ ತಮ್ಮ ಧರ್ಮ, ಕರ್ತವ್ಯವನ್ನು ಬಿಟ್ಟು ಅನ್ಯ ಮಾರ್ಗ ಹಿಡಿದಿದ್ದಾರೆ. ಇದರಿಂದ ಅವರಿಗೂ ಶ್ರೇಯಸ್ಸಾಗದು. ಅಲ್ಲದೆ ಲೋಕ ಕಲ್ಯಾಣವೂ ಆಗದು. ಇದು ಉದಾಹರಣೆ ಮಾತ್ರ.

ಆದ್ದರಿಂದ ವೇದ, ಶಾಸ್ತ್ರ, ಧರ್ಮ, ಕರ್ಮಗಳನ್ನು ತಿಳಿದುಕೊಂಡು ಮನುಷ್ಯನು ಬದುಕಬೇಕೆಂದು ಧರ್ಮವು ನಾಶವಾಗುವ ಆ ಕಾಲದಲ್ಲಿ ಅವತಾರ ತಾಳಿ, ಸನಾತನ ಧರ್ಮವನ್ನು ರಕ್ಷಣೆ ಮಾಡಿದ ಶ್ರೀ ಶಂಕರ ಭಗವತ್ಪಾದರು ಸರ್ವ ಕಾಲದಲ್ಲಿಯೂ ಲೋಕವಂದ್ಯರು'' ಎಂದು ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾ ಸನ್ನಿಧಾನಂಗಳವರು ನುಡಿದರು.

ಅವರು ಮಂಗಳೂರು ಕೋಟೆಕಾರು ಶ್ರೀ ಶೃಂಗೇರಿ ಮಠದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ನೆರೆದ ಶಿಷ್ಯವೃಂದವನ್ನು ಆಶೀರ್ವಚನ ಮಾಡುತ್ತ ಅನುಗ್ರಹ ಭಾಷಣ ಮಾಡಿದರು. ಈ ಗುರುವಂದನಾ ಕಾರ್ಯಕ್ರಮದಲ್ಲಿ ಭಾರತದ ಪ್ರಧಾನ ಮಂತ್ರಿಗಳ ಆರ್ಥಿಕ ಸಲಹೆಗಾರ ಶ್ರೀ ಕೆ.ಪಿ.ಕೃಷ್ಣನ್, ಶ್ರೀ ಹಿರಣ್ಯ ವೆಂಕಟೇಶ್ ಭಟ್, ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಕುಂದಾಪುರದ ಶ್ರೀ ನರಸಿಂಹ ಮೂರ್ತಿ, ಪುತ್ತೂರಿನ ವಕೀಲ ಶ್ರೀ ಜಗನ್ನಿವಾಸ ರಾವ್, ಕರ್ನಾಟಕ ಬ್ಯಾಂಕಿನ ಆಡಳಿತ ನಿರ್ದೇಶಕ ಶ್ರೀ ಜಯರಾವ್ ಭಟ್ ಮೊದಲಾದವರು ಜಗದ್ಗುರುಗಳ ಕುರಿತು ಅಭಿನಂದನಾ ಭಾಷಣ ಮಾಡಿದರು.

ಕ.ಸಾ.ಪ. ಮಾಜಿ ರಾಜ್ಯಾಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು ಕ.ಸಾ.ಪ. ಜಿಲ್ಲಾಧ್ಯಕ್ಷ ಶ್ರೀ ಪ್ರದೀಪ್ ಕುಮಾರ್ ಕಲ್ಕೂರ್, ಡಾ| ಕೆ. ಎಸ್. ಕಾರಂತ ಮೊದಲಾದವರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಸ್ವಾಗತಿಸಿದರು. ಶ್ರೀ ವಾದಿರಾಜ ಕಲ್ಲೂರಾಯ ಕಾರ್ಯಕ್ರಮ ನಿರೂಪಣೆ ಮಾಡಿದರು.

ಶ್ರೀ ಶೃಂಗೇರಿ ಪೀಠವನ್ನು ಭಾರತಆರ್ಷ ಪರಂಪರೆಯಲ್ಲಿ ಜಗದಗಲ ಹರಡಿದ ಖ್ಯಾತಿವಂತರಾದ ಶ್ರೀ ಶ್ರೀ ಭಾರತೀತೀರ್ಥರು ಶ್ರೀಮಚ್ಛಂಕರಾವಿಚ್ಛಿನ್ನ ಪರಂಪರೆಯಲ್ಲಿ 36ನೇ ಯತಿವರೇಣ್ಯರಾಗಿದ್ದು ತಮ್ಮ 61ನೇ ವರ್ಧಂತಿಯಲ್ಲಿ ಕಾಲಿರಿಸಿದ್ದಾರೆ. ವರ್ಷ ಪೂರ್ತಿ ಆಚರಿಸಲ್ಪಡುವ ಶ್ರೀಗಳ ವರ್ಧಂತಿ ಉತ್ಸವದಲ್ಲಿ ಈ ಗುರುವಂದನಾ ಕಾರ್ಯಕ್ರಮವೂ ಒಂದಾಗಿದ್ದು, ಮಂಗಳೂರಿನ ಕೋಟೆಕಾರು ಶ್ರೀ ಶೃಂಗೇರಿ ಮಠದಲ್ಲಿ ಉಡುಪಿ-ದಕ್ಷಿಣ ಕನ್ನಡ ಜಿಲ್ಲೆಗಳ ಅವರ ಅಪಾರ ಶಿಷ್ಯವೃಂದವು ಸೇರಿ ಗುರುವಂದನಾ ಸಮಿತಿಯನ್ನು ರಚಿಸಿಕೊಂಡು ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ತಾ.23-5-2011ರಿಂದ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಗಣಪತಿ ಅಥರ್ವ ಶೀರ್ಷ ಹೋಮ, ಶ್ರೀ ಲಲಿತಾ ಹೋಮ, ಶ್ರೀ ಚಂಡಿಕಾ ಯಾಗ ಹಾಗೂ ಶ್ರೀ ರುದ್ರಹೋಮಗಳು ನೆರವೇರಿತು.

ತಾ.24ರಂದು ಸಂಜೆ ಜಗದ್ಗುರುಗಳು ಶ್ರೀಮಠಕ್ಕೆ ಆಗಮಿಸಿದಾಗ ಪೂರ್ಣ ಕುಂಭ ಸ್ವಾಗತ, ಧೂಳೀಪಾದ ಪೂಜೆ ಮೊದಲಾದವುಗಳು ನೆರವೇರಿತು. ತಾ.25ರಂದು ಸಂಜೆ ಗುರುವಂದನಾ ಕಾರ್ಯಕ್ರಮದಲ್ಲಿ ಶ್ರೀಗಳಿಗೆ ಭಿನ್ನವತ್ತಳೆ ಅರ್ಪಿಸಲಾಯಿತು. ನಂತರ ವಿವಿಧ ಶಿಷ್ಯ ವರ್ಗದವರಿಂದ, ಸಂಘ ಸಂಸ್ಥೆಗಳಿಂದ ಹಾಗೂ ಭಕ್ತಾದಿಗಳಿಂದ ಫಲಪುಷ್ಪ ಸಮರ್ಪಣೆಯ ಕಾರ್ಯಕ್ರಮ ನೆರವೇರಿತು. ತಾ.26ರಂದು ಬೆಳಿಗ್ಗೆ ಶ್ರೀಗಳವರ ಸಮ್ಮುಖದಲ್ಲಿ ವಿದ್ವತ್ ಸನ್ಮಾನವೂ ನೆರವೇರಿತು. ಸಂಜೆ 3 ಗಂಟೆಗೆ ಶ್ರೀಗಳವರು ಶ್ರೀ ಶಂಕರ ಮಠದಿಂದ ನಿರ್ಗಮಿಸಿದರು.

ಈ ನಾಲ್ಕೂದಿನಗಳೂ ಕೋಟೆಕಾರಿನ ಶೃಂಗೇರಿ ಮಠದಲ್ಲಿ ವಿವಿಧ ಪೂಜಾ ಕಾರ್ಯಕ್ರಮಗಳೂ ಬ್ರಾಹ್ಮಣ ಸುವಾಸಿನಿ ಆರಾಧನೆಯೂ ನಡೆಯಿತು.

**ಉಡುಪಿಯಿಂದ ಶ್ರೀಗಳಿಗೆ ಭಕ್ತಿ ಸಮರ್ಪಣೆ :**

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು ಇದರ ವತಿಯಿಂದ ಶ್ರೀಗಳವರಿಗೆ ಭಕ್ತಿ ಸಮರ್ಪಿಸಲಾಯಿತು. ತಾ.25ರಂದು ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಹಾಗೂ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿ ರಾವ್ ಮತ್ತು ಶ್ರೀ ವಾಸುದೇವರಾವ್ ದಂಪತಿ ಮೊದಲಾದವರು ಶ್ರೀಗಳವರ ಪಾದಪೂಜೆ ನೆರವೇರಿಸಿ ಕೊಟ್ಟರು.ಅಂದು ಸಂಜೆ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಸಂಘದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಪ್ರಫುಲ್ಲ ಚಂದ್ರರಾವ್, ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು, ಶ್ರೀ ಸುಧಾಕರ ಬೆಳ್ಳೆ ಹಾಗೂ ಶ್ರೀ ವಿಶ್ವನಾಥ್ ಶ್ಯಾನುಭಾಗ್, ಗೀತಾ ಕೆ.ರಾವ್ ಮೊದಲಾದವರು ಭಾಗವಹಿಸಿ ಸಂಘದ ವತಿಯಿಂದ ಶ್ರೀಗಳವರಿಗೆ ಫಲ-ಪುಷ್ಪ ಸಮರ್ಪಣೆ ಮಾಡಿದರು.

ವರದಿ : **ಕೃಷ್ಣಕುಮಾರ್ ಮಟ್ಟು**

## ಶ್ರೀ ಆದಿಶಂಕರ ಬ್ರಾಹ್ಮಣ ಪರಿಷತ್ತು ಮೂಡುಬಿದಿರೆ-ಸಾಂಸ್ಕೃತಿಕ ಕಾರ್ಯಕ್ರಮ



ಶ್ರೀ ಆದಿಶಂಕರ ಬ್ರಾಹ್ಮಣ ಪರಿಷತ್ತು ಮೂಡಬಿದಿರೆ ಇದರ ವತಿಯಿಂದ ಸೌರಯುಗಾದಿಯ ಪ್ರಯುಕ್ತ ತಾ.15-4-2011ರಿಂದ ತಾ.17-4-2011ರ ವರೆಗೆ 3 ದಿನಗಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರತಿದಿನ ಅಪರಾಹ್ನ 4 ಗಂಟೆಯಿಂದ 6ರ ವರೆಗೆ ಸಮಾಜ ಮಂದಿರ ಮಿನಿಹಾಲ್ ಮೂಡಬಿದಿರೆಯಲ್ಲಿ ನಡೆದುವು.

ತಾ.15-4-2011ರಂದು ಪೊಳಲಿ ಜಗದೀಶ ರಾವ್ ಮತ್ತು ಬಳಗದವರಿಂದ ಹರಿಕಥಾ ಕಾಲಕ್ಷೇಪ, ಮರುದಿನ ಯಕ್ಷಗಾನ ತಾಳಮದ್ದಳೆ-ಶಂಕರ ವಿಜಯ ಹಾಗೂ ಕೊನೆಯ ದಿನ ಬೊಳ್ಳಾವ ನಾರಾಯಣ ಸತ್ಯ ಶಂಕರ ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

## ಮೂಡಬಿದ್ರೆ : ರಾಜ್ಯಕ್ಕೆ ದ್ವಿತೀಯ ಸ್ಥಾನಿ ಕು| ಅನುಜ್ಞ ಕೆ. ಇವರಿಗೆ ಸನ್ಮಾನ

(...1ನೇ ಪುಟದಿಂದ)

ಪ್ರಯಾಣ ಸೌಕರ್ಯಗಳಿಲ್ಲದ ಕಾಲದಲ್ಲಿ ದೇಶದ ಉದ್ದಗಲಕ್ಕೂ ಸಂಚರಿಸಿ ಧಾರ್ಮಿಕ ಸಮನ್ವಯ ಸಾಧಿಸಿದವರು ಅವರು ಎಂದರು.

ಮೂಡಬಿದಿರೆ ಸಮಾಜ ಮಂದಿರದಲ್ಲಿ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ಶೃಂಗೇರಿ ಮಠದ ಧರ್ಮಾಧಿಕಾರಿ ಕೋಟೆಕಾರಿನ ಬೊಳ್ಳಾವ ಸತ್ಯಶಂಕರ ಅವರು ಮಾತಾಡಿ ಭಾರತ ಹರಿಹಂಚಾದ ಕಾಲಕ್ಕೆ ಶಂಕರಾಚಾರ್ಯರು ಅದ್ವೈತ ಸಿದ್ಧಾಂತ ಪ್ರತಿಪಾದಿಸಿ ಭರತಖಂಡವನ್ನು ನಾಲ್ಕು ವಿಭಾಗಗಳನ್ನಾಗಿಸಿ ವೇದಪೀಠಗಳನ್ನು ಸ್ಥಾಪಿಸಿ ನಾಲ್ವರು ಯತಿಗಳನ್ನು ನಿಯಮಿಸಿ ಧರ್ಮಾಧಿಕಾರ ನೀಡಿದವರು ಸಂಘಟನೆಯೊಂದಿಗೆ ಶಂಕರ ತತ್ವಗಳನ್ನು ಎಲ್ಲರಿಗೂ ತಿಳಿಸುವ ಕಾರ್ಯ ನಡೆಯಬೇಕೆಂದರು. ಆದಿಶಂಕರ ಬ್ರಾಹ್ಮಣ ಪರಿಷತ್ತಿನ ಕಾರ್ಯಾಧ್ಯಕ್ಷ ಕಲಾವಿದ ಸಂಘಟಕ ಎಂ.ದೇವಾನಂದ ಭಟ್ ಬೆಳುವಾಯಿ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದರು. ಗುರುಪ್ರಸಾದ್ ಪಿ.ಜೆ. ಈ ಕಾರ್ಯಕ್ರಮವನ್ನು ನಿರೂಪಿಸಿದ್ದು ಕಾರ್ಯದರ್ಶಿ ರಾಘವೇಂದ್ರ ಹೆಬ್ಬಾರ್ ವಂದಿಸಿದರು. ಗೌರವಾಧ್ಯಕ್ಷರು ಬಿ.ನಾರಾಯಣ ರಾವ್ ಉಪಸ್ಥಿತರಿದ್ದರು. ಆ ಬಳಿಕ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತಲಪಾಡಿಯ ಯಕ್ಷಸಿಂಧೂರ ಮಹಿಳಾ ಯಕ್ಷಗಾನ ಕೂಟದವರಿಂದ 'ಕರ್ಣಪರ್ವ' ತಾಳಮದ್ದಳೆ ಜರಗಿತು.

ಚಿತ್ರ : **ಶೋಭಾ ಸ್ಟುಡಿಯೋ, ಮೂಡುಬಿದಿರೆ**

## ಕಲೆಗಳಿಂದ ವ್ಯಕ್ತಿತ್ವ ವಿಕಸನ : ಪತ್ತರ್

(...1ನೇ ಪುಟದಿಂದ)

ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ಅವರು ಅಧ್ಯಕ್ಷತೆ ವಹಿಸಿದ್ದು ಮಾತನಾಡುತ್ತಾ ಕಲೆಗಳ ಅಭಿವೃದ್ಧಿಗಾಗಿ ಸಂಘವು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ನಮ್ಮವರೇ ಆದ ವಸಂತ್‌ರಾವ್ ಪ್ರತಿಭಾನ್ವಿತ ಕಲಾವಿದ. ಅವರು ಚಿತ್ರಕಲೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಅವರು ಉತ್ತಮ ಬರಹಗಾರರೂ, ಸಾಹಿತಿಯೂ ಆಗಿದ್ದಾರೆ. ಚಿತ್ರಕಲಾವಿದನಲ್ಲಿ ಇಂತಹ ಪ್ರತಿಭೆ ನಿಜಕ್ಕೂ ನಮಗೆಲ್ಲರಿಗೂ ತುಂಬಾ ಸಂತೋಷ ತಂದಿದೆ ಎಂದರು. ಇನ್‌ಸ್ಟಿಟ್ಯೂಟ್ ಆಫ್ ಫೋಕ್ ಆ್ಯಂಡ್ ಟ್ರೈಬಲ್ ಆರ್ಟ್ ಉಡುಪಿ ಘಟಕದ ಅಧ್ಯಕ್ಷರಾದ ವಸಂತ ರಾವ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಶೃಂಗೇರಿ ಶ್ರೀಗಳವರಿಗೆ ಪೌರಸಮ್ಮಾನ

## ಭಗವಂತನ ಅನುಗ್ರಹ ಸಾರ್ಥಕ ಬದುಕಿಗೆ ಕಾರಣ : ಶ್ರೀ ಶ್ರೀಗಳವರು



ಶ್ರದ್ಧೆ ಮತ್ತು ವಿಶ್ವಾಸಗಳೇ ಸನಾತನ ಧರ್ಮದ ಅಡಿಗಲ್ಲುಗಳು. ವ್ಯಕ್ತಿತ್ವವನ್ನು ವಿಕಸನಗೊಳಿಸುವ ಇಂತಹ ಧರ್ಮದ ಆಚರಣೆಯಿಂದ ಸಮಾಜ ಹಸನಾಗುತ್ತದೆ. ಪರಮಾತ್ಮನ ವಿಶ್ವವ್ಯಾಪಿತ್ವವನ್ನು ತೋರಿಸಿಕೊಟ್ಟ ಕೀರ್ತಿ ಸನಾತನ ಧರ್ಮಕ್ಕೆ ಸಲ್ಲುತ್ತದೆ. ಆದ್ದರಿಂದ ಜಗತ್ತಿನಾದ್ಯಂತ ವ್ಯಾಪಿಸಿರುವ ಭಗವಂತನ ಅನುಗ್ರಹ ಸಾರ್ಥಕ ಬದುಕಿಗೆ ಕಾರಣ ಎಂದು ಶೃಂಗೇರಿ ಶ್ರೀಶಾರದಾ ಪೀಠಾಧೀಶ್ವರ, ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಹೇಳಿದರು.

ಅವರು ಕುಂದಾಪುರದ ಶ್ರೀ ಕುಂದೇಶ್ವರ ದೇವಾಲಯದ ಒಳಾಂಗಣದಲ್ಲಿ ತಮ್ಮ ಷಷ್ಟ್ಯಬ್ದ ಪೂರ್ತಿಯ ಅಂಗವಾಗಿ ಊರ ಸಮಸ್ತ ನಾಗರಿಕರು ಸೇರಿ ನೀಡಿದ ಪೌರಸಮ್ಮಾನಕ್ಕೆ ಉತ್ತರ ನೀಡಿ ಮಾತನಾಡುತ್ತಿದ್ದರು. ಪುರಸಭಾಧ್ಯಕ್ಷ ಶ್ರೀ ಕೆ. ಮೋಹನದಾಸ ಶೆಣೈ ಅವರು ಸಮ್ಮಾನ ಪತ್ರ ಮತ್ತು ಫಲ-ಪುಷ್ಪಗಳನ್ನು ಸಮರ್ಪಿಸಿದರು.

ನಂತರ ನಡೆದ ಗುರುವಂದನೆಯಲ್ಲಿ ವಿದ್ವಾನ್ ವಾಸುದೇವ ಜೋಯ್ಸರು ಅಭಿವಂದನಾ ಭಾಷಣ ಮಾಡಿದರು. ತಾಲೂಕಿನಾದ್ಯಂತದ ದೇವಾಲಯಗಳವರು, ಸಂಘ-ಸಂಸ್ಥೆಗಳವರು ಮತ್ತು ಶಿಷ್ಯಸ್ತೋಮದವರು ಶ್ರೀ ಶ್ರೀಗಳವರಿಗೆ ಫಲ ಸಮರ್ಪಣೆ ಮಾಡಿ ಆಶೀರ್ವಾದ ಪಡೆದರು. ಅದಕ್ಕೆ ಮುನ್ನ ಶ್ರೀ ಕುಂದೇಶ್ವರ ದೇವಾಲಯದ ಸ್ವಾಗತ ಗೋಪುರದ ಬಳಿ ಶ್ರೀ ಶ್ರೀ ಗಳವರಿಗೆ ಸಾಂಪ್ರದಾಯಿಕ ಪೂರ್ಣಕುಂಭ ಸ್ವಾಗತ ನೀಡಿ, ವೇದ-ವಾದ್ಯ ಘೋಷಗಳೊಂದಿಗೆ ಅವರನ್ನು ಬರಮಾಡಿಕೊಳ್ಳಲಾಯಿತು.

ಗುರುವಂದನಾ ಸಮಿತಿಯ ಉಪಾಧ್ಯಕ್ಷ ಡಾ| ಕೆ.ಎಸ್.ಕಾರಂತ ಸ್ವಾಗತಿಸಿದರು. ಮತ್ತೊಬ್ಬ ಉಪಾಧ್ಯಕ್ಷ ಶ್ರೀ ಬಿ.ಎಂ. ಸುಕುಮಾರ ಶೆಟ್ಟಿ ಹಾರಾರ್ಪಣೆ ಮಾಡಿದರು. ಪ್ರೊ| ಕಾಳಾವರ ಶಂಕರರಾವ್ ಶ್ರೀ ಶ್ರೀ ಗಳವರಿಗೆ ಗೌರವಾರ್ಪಣೆ ಮಾಡುವವರ ಹೆಸರನ್ನು ಘೋಷಿಸಿದರು. ಶೃಂಗೇರಿ ಶ್ರೀಶಾರದಾ ಪೀಠದ ಪ್ರಾಂತೀಯ ಧರ್ಮಾಧಿಕಾರಿ ಡಾ| ಎಚ್.ವಿ.ನರಸಿಂಹಮೂರ್ತಿಯವರು ಪೌರ ಸಮ್ಮಾನ ಪತ್ರ ಓದಿ, ಕಾರ್ಯಕ್ರಮ ನಿರ್ವಹಿಸಿದರು. ಸಮಿತಿಯ ಅಧ್ಯಕ್ಷ ಶ್ರೀ ಸುಬ್ರಾಯ ಹಾಲಂಬಿಯವರು ಧೂಳೀಪಾದಪೂಜೆ ಮಾಡಿದರು. ರಾತ್ರಿ 8-30ರಿಂದ ಶ್ರೀ ಶ್ರೀ ಗಳವರಿಂದ ಶ್ರೀ ಶಾರದಾ ಚಂದ್ರಮೌಳೀಶ್ವರ ಪೂಜೆ ನಡೆಯಿತು.

ತಾ.19ರ ಬೆಳಿಗ್ಗೆ ಶ್ರೀ ಕುಂದೇಶ್ವರ ಯಾಗಶಾಲೆಯಲ್ಲಿ ರುದ್ರೈಕಾದಶಿನೀ ಹವನ ನಡೆಯಿತು. ಬೆಳಿಗ್ಗೆ 9-30ರಿಂದ ಶ್ರೀ ಶ್ರೀ ಗಳವರು ಶೃಂಗೇರಿ ಶ್ರೀ ಶಾರದಾಪೀಠದ ಪರಂಪರಾಗತ ಶಿಷ್ಯರಾದ ರಾಮಕ್ಷತ್ರಿಯ, ಕೊಂಕಣಖಾರ್ವಿ ಮೊದಲಾದ ಸಮಾಜದವರ ದೇವಾಲಯಗಳಿಗೆ ತೆರಳಿ, ಅಲ್ಲಿ ಸೇರಿದ್ದ ಜನಸ್ತೋಮವನ್ನು ಆಶೀರ್ವದಿಸಿದರು. ಮಧ್ಯಾಹ್ನ ನಂತರ 3-30ಕ್ಕೆ ಉತ್ತರಕನ್ನಡದ ಕಡೆಗೆ ಪಯಣಿಸಿದರು.

ವರದಿ : **ಡಾ| ಹೆಚ್.ವಿ.ನರಸಿಂಹಮೂರ್ತಿ**

Krishna Rao
Ph :2520652
Mob. :9902029048
KISHAN
Studio & Video
Indoor Photography & Port Folio Photography, Video & Mixing, Lamination
MAIN ROAD, MAJOOR & BANTAKAL.

# ಶ್ರೀಶಂಕರ ಜಯಂತಿ ಸಮಿತಿ ದ.ಕ.ಜಿಲ್ಲೆ ಇವರಿಂದ ಶ್ರೀಶಂಕರ ಜಯಂತಿ ಆಚರಣೆ

ಸನಾತನ ಹಿಂದೂ ಧರ್ಮವನ್ನು ರಕ್ಷಿಸಿ ಪುನರುತ್ಥಾನಕ್ಕೆ ಕಾರಣರಾದ ಶ್ರೀಶಂಕರ ಭಗವತ್ಪಾದರ ಜಯಂತಿಯನ್ನು ಯೋಗ್ಯ ರೀತಿಯಲ್ಲಿ ಆಚರಿಸಬೇಕೆಂದು ಪರಮಪೂಜ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಆದೇಶದಂತೆ ಶ್ರೀಶಂಕರ ಜಯಂತಿ ಸಮಿತಿ, ದ.ಕ. ಜಿಲ್ಲೆ ಇವರ ವತಿಯಿಂದ ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳು ನಡೆದವು. ಈ ಕಾರ್ಯಕ್ರಮದ ಉದ್ಘಾಟನೆಯು ತಾ.08-05-2011 ಗುರುವಾರ ದಂದು ಶ್ರೀ ಸುಬ್ರಹ್ಮಣ್ಯಸಭಾದಲ್ಲಿ ಶ್ರೀ ಶ್ರೀ ಜಿತಕಾಮಾನಂದ ಸ್ವಾಮೀಜಿ, ರಾಮಕೃಷ್ಣಾಶ್ರಮ ರಿಂದ ನಡೆಯಿತು. ಶ್ರೀಯುತ ಪಿ.ಅನಂತಕೃಷ್ಣ ಭಟ್, ಕರ್ನಾಟಕ ಬ್ಯಾಂಕ್ ಇವರು ಅಧ್ಯಕ್ಷತೆ ವಹಿಸಿದರು. ಶ್ರೀ ಶಂಕರ ಭಗವತ್ಪಾದರ ತತ್ವಗಳ ಬಗ್ಗೆ ಶ್ರೀಗಳು ಧಾರ್ಮಿಕ ಪ್ರವಚನ ನೀಡಿದರು. ಶ್ರೀ ಪಿ.ಶ್ರೀಕಾಂತರವರು ಸ್ವಾಗತಿಸಿ ವಂದಿಸಿದರು. ಶ್ರೀ ಶಂಕರ ಜಯಂತಿ ಸಮಿತಿಯ ಸಂಚಾಲಕರಾದ ಶ್ರೀ ಜಿ.ಎನ್.ಭಟ್ ಹಾಗೂ ಶ್ರೀ ಬಾಲಕೃಷ್ಣ ಭಟ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲೆಯ ಹಲವು ಕ್ಷೇತ್ರಗಳಲ್ಲಿ ವಿವಿಧ ಕಾರ್ಯಕ್ರಮಗಳು ನಡೆದು ತಾ.15-05-2011ರ ರವಿವಾರದಂದು ಸಮಾರೋಪ ಕಾರ್ಯಕ್ರಮ ಶ್ರೀ ಸುಬ್ರಹ್ಮಣ್ಯ ಸಭಾ ಸದನದಲ್ಲಿ ನೆರವೇರಿತು. ಬೆಳಿಗ್ಗೆ ಶ್ರೀ ಶಂಕರ ಭಗವತ್ಪಾದರಿಗೆ ಷೋಡಶೋಪಚಾರ ಪೂಜೆ, ಶತರುದ್ರ, ಅಷ್ಟವಧಾನ ಸೇವೆ, ಮಂಗಳಾರತಿ ಹಾಗೂ ಪ್ರಸಾದ ವಿತರಣೆಗಳು ನಡೆದವು. ಅಪರಾಹ್ನ ಶಾಲಾ ಮಕ್ಕಳಿಗೆ ಶ್ರೀ ಗಣೇಶ ಪಂಚರತ್ನಸ್ತೋತ್ರ ಕಂಠಪಾಠ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶ್ರೀ ಸ್ವಾಮಿನಿ ಸುಪ್ರಿತಾನಂದ, ಚಿನ್ಮಯ ಮಿಶನ್ ಇವರಿಂದ ಸಮಾರೋಪ ಉಪನ್ಯಾಸ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶಂಕರ ಜಯಂತಿ ಸಮಿತಿಯ ಶ್ರೀ ವಿನಯಕುಮಾರ ಸೊರಕೆಯವರು ವಹಿಸಿದ್ದರು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಜಗನ್ನಿವಾಸ ರಾವ್, ಶ್ರೀ ಜಿ.ಎನ್.ಭಟ್ ಹಾಗೂ ಶ್ರೀ ಬಾಲಕೃಷ್ಣ ಭಟ್‌ರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಸಭಾ ಕಾರ್ಯದರ್ಶಿ ಶ್ರೀ ಕರುಣಾ ರಾವ್ ಬೆಳ್ಳೆಯವರು ಕಾರ್ಯಕ್ರಮ ಸಂಯೋಜಿಸಿದರೆ ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ.ಎಸ್. ಇವರು ಕಾರ್ಯಕ್ರಮ ನಿರ್ವಹಿಸಿದರು.

ವರದಿ : **ಪಿ.ಶ್ರೀಕಾಂತ ರಾವ್**

# ಮೈಸೂರು : ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ಘಟಕದ ಕಾರ್ಯಕ್ರಮ

ಶ್ರೀ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಮಹಿಳಾ ವಿಭಾಗ ಮೈಸೂರು ಇದರ ಸಭೆಯು ಕಾರ್ಯಕ್ರಮವು ತಾ.17-4-2011ರಂದು ಶ್ರೀಮತಿ ಪ್ರತಿಭಾ ಪ್ರಶಾಂತರವರ ಮನೆಯಲ್ಲಿ ಜರಗಿತು. ಶ್ರೀಮತಿ ಪ್ರತಿಭಾ ಹಾಗೂ ಶ್ರೀಮತಿ ಉಷಾ ರಾಧಕೃಷ್ಣರವರಿಂದ ಶ್ರೀ ಶಂಕರಾಚಾರ್ಯ ವಿರಚಿತ ಗಣೇಶಸ್ತುತಿ ಪ್ರಾರ್ಥನೆಯೊಂದಿಗೆ ಹಾಗೂ ಸಂಘದ ಅಧ್ಯಕ್ಷೆ ಶ್ರೀಮತಿ ರಮಾವಾಣಿ ಟಿ.ಸಿ.ರಾವ್ ತಾಳೆಪ್ಪಾಡಿರವರ ಸ್ವಾಗತ ಭಾಷಣದೊಂದಿಗೆ ಕಾರ್ಯಕ್ರಮವು ಆರಂಭವಾಯಿತು.

ಕಸದಲ್ಲಿ ರಸವೆಂಬ ನಾಣ್ನುಡಿಗೆ ಪೂರಕವಾಗಿ ಕುಶಲಕಲೆಯಲ್ಲಿ ಕೈಚಳಕವನ್ನು ತೋರಿಸುವಲ್ಲಿ ಪ್ರಸಿದ್ಧಿ ಪಡೆದಿರುವ ಶ್ರೀಮತಿ ಉಷಾ ರಾಧಾಕೃಷ್ಣರವರು ಹಳೆಯ ಸೀರೆಗಳಲ್ಲಿ ಹಾಗೂ ತ್ಯಾಜ್ಯ ಬಟ್ಟೆಗಳಲ್ಲಿ ರಝಾಯಿ ಹೊಲಿಯುವ ವಿಧಾನವನ್ನು ಹಾಗೂ ವಿವಿಧ ರೀತಿಯ ಕಸೂತಿಗಳನ್ನು ತೋರಿಸಿಕೊಟ್ಟರು. ಶ್ರೀಮತಿ ಪ್ರತಿಭಾ ಮತ್ತು ಶ್ರೀಮತಿ ಉಷಾರವರು ಶ್ರೀ ಶಂಕರಾಚಾರ್ಯ ರಿಂದ ರಚಿಸಲ್ಪಟ್ಟ ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡಿದರು. ಮಹಿಳಾ ಸಂಘದ ಕಾರ್ಯದರ್ಶಿಯಾದ ಶ್ರೀಮತಿ ಲತಾ ರಾಮಮೂರ್ತಿಯವರು ''Maching the words'' ಎಂಬ ಆಟವನ್ನು ಆಡಿಸಿದರು. ಈ ಆಟವು ಅದ್ಭುತವಾಗಿತ್ತು. ಶ್ರೀಮತಿ ಪ್ರತಿಭಾರವರು ವಿನೂತನ ಶೈಲಿಯ ಆಟಗಳ ಸ್ಪರ್ಧೆಯನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನವನ್ನು ವಿತರಿಸಿದರು. ಸುಮಾರು ಎರಡೂವರೆ ಗಂಟೆ ಅವಧಿಯ ಈ ಮನೋರಂಜನಾ ಕಾರ್ಯಕ್ರಮದಲ್ಲಿ ಸಮಯ ಜಾರಿ ಹೋದುದೇ ಅರಿವಿಗೆ ಬರಲಿಲ್ಲ. ಸಮಾಜ ಬಾಂಧವರನ್ನು ಒಗ್ಗೂಡಿಸುವ ಈ ಕಾರ್ಯಕ್ರಮವು ಶ್ಲಾಘನೀಯವಾಗಿತ್ತು. ನಂತರ ಪ್ರತಿಭಾ ಹಾಗೂ ಪ್ರಶಾಂತ ದಂಪತಿಗಳು ಸ್ವಾದಿಷ್ಟವಾದ ಭೋಜನವಿತ್ತು ಸತ್ಕರಿಸಿದರು. ಸಂಘದ ಅಧ್ಯಕ್ಷರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ವರದಿ : **ರಮಾವಾಣಿ ಟಿ.ಸಿ.ರಾವ್**

# ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ಶೇ.10 ಡಿವಿಡೆಂಡ್ ನೀಡಲು ವಿಶೇಷ ಸರ್ವಸದಸ್ಯರ ಸಭೆಯ ನಿರ್ಧಾರ


ತಾ.28-5-2011ನೇ ಶನಿವಾರ ಅಪರಾಹ್ನ 4 ಗಂಟೆಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ಸರ್ವಸದಸ್ಯರ ವಿಶೇಷ ಸಭೆಯು ಕಚೇರಿಯ ಭೂವರಾಹ ಸಂಕೀರ್ಣದ ಸಭಾಭವನದಲ್ಲಿ ನಡೆಯಿತು. ಈ ಸಭೆಯಲ್ಲಿ 2009-10ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅಂಗೀಕಾರ ಹಾಗೂ ನಿವ್ವಳ ಲಾಭದ ವಿಂಗಡಣೆಯ ಬಗ್ಗೆ ನಿರ್ಧರಿಸಲಾಯಿತು.

ಸೊಸೈಟಿಯ ಅಧ್ಯಕ್ಷರಾದ ಶ್ರೀ ಎಮ್. ಸದಾನಂದರಾಯರು ಸದಸ್ಯರನ್ನು ಸ್ವಾಗತಿಸಿ, ಪ್ರಸಕ್ತ ವರ್ಷದ ಸೊಸೈಟಿಯ ಬೆಳವಣಿಗೆಯನ್ನು ಸಭೆಗೆ ವಿವರಿಸಿದರು. ಕುಕ್ಕಿಕಟ್ಟೆಯಲ್ಲಿ ಶಾಖೆಯನ್ನು ಪ್ರಾರಂಭಿಸಿದುದರಿಂದ ಲಾಭಾಂಶದಲ್ಲಿ ಹೆಚ್ಚಿನ ಪ್ರಗತಿ ಕಳೆದ ವರ್ಷ ಆಗಲಿಲ್ಲ. ಆದರೆ ಪ್ರಸಕ್ತ ವರ್ಷದಲ್ಲಿ ಹೆಚ್ಚಿ ಪ್ರಗತಿಯ ಸಾಧ್ಯತೆಯನ್ನು ತಿಳಿಸಿ ಅದಕ್ಕಾಗಿ ಶ್ರಮಿಸುತ್ತಿರುವ ಸದಸ್ಯರು, ಸಿಬ್ಬಂದಿ ವರ್ಗ ಮತ್ತು ನಿರ್ದೇಶಕರೆಲ್ಲರ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.

ಸಂಘವು 2009-10ನೇ ಸಾಲಿಗೆ ರೂ.1,73,478.50 ಲಾಭ ಗಳಿಸಿದ್ದು ಕಾರ್ಯದರ್ಶಿಯವರಾದ ಶ್ರೀ ಪಟ್ಟಾಭಿರಾಮ ಎನ್.ಎಸ್. ರವರು ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಟ್ಟರು. ಸಭೆಯು ಅದನ್ನು ಸರ್ವಾನುಮತದಿಂದ ಅಂಗೀಕರಿಸಿತು. ನಿವ್ವಳ ಲಾಭದ ವಿಂಗಡಣೆಯಾಗಿ ಸೊಸೈಟಿಯ ಸದಸ್ಯರಿಗೆ ಶೇ.10 ಡಿವಿಡೆಂಡ್ ನೀಡಲು ನಿರ್ಣಯಿಸಲಾಯಿತು. ಈ ಸಂದರ್ಭದಲ್ಲಿ ಕಾರ್ಯದರ್ಶಿಯವರು ಉಳಿತಾಯ ಖಾತೆ ಹೊಂದಿರುವ ಸದಸ್ಯರ ಖಾತೆಗಳಿಗೆ ಲಾಭಾಂಶವನ್ನು ಜಮೆ ಮಾಡಲಾಗುವುದು ಎಂದು ತಿಳಿಸಿದರು. ಉಳಿತಾಯ ಖಾತೆ ತೆರೆಯದೇ ಇರುವ ಸದಸ್ಯರು ಖುದ್ದಾಗಿ ಸೊಸೈಟಿಯಿಂದ ಲಾಭಾಂಶವನ್ನು ಪಡೆದುಕೊಳ್ಳಬಹುದೆಂದು ವಿನಂತಿಸಿಕೊಂಡರು.

ಸಭೆಯ ಆರಂಭದಲ್ಲಿ ಶ್ರೀಮತಿ ಸುನೀತಾ ಹಾಗೂ ಶ್ರೀಮತಿ ಭಾರತಿಯವರಿಂದ ಪ್ರಾರ್ಥನೆ ನಡೆದು, ಕೊನೆಯಲ್ಲಿ ಕುಕ್ಕಿಕಟ್ಟೆ ಶಾಖೆಯ ಪ್ರಬಂಧಕರಾದ ವಿಶ್ವನಾಥ ರಾವ್ ಕುಕ್ಕೆಹಳ್ಳಿ ಧನ್ಯವಾದವನ್ನಿತ್ತರು. ಸೊಸೈಟಿಯ ಉಪಾಧ್ಯಕ್ಷರಾದ ಶ್ರೀ ಕೆ. ವೇಣು ಗೋಪಾಲರಾವ್ ಹಾಗೂ ನಿರ್ದೇಶಕರೆಲ್ಲರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಶೃಂಗೇರಿ ಶ್ರೀಗಳವರಿಂದ 'ಶ್ರೀಶಂಕರಾಚಾರ್ಯರು' ಪುಸ್ತಕ ಬಿಡುಗಡೆ



ಕುಂದಾಪುರ : ಪ್ರಶ್ನೋತ್ತರ ರೂಪದ ಇಂತಹ ಪುಸ್ತಕಗಳು ಇಂದಿನ ದಿನಗಳಲ್ಲಿ ತೀರಾ ಪ್ರಸ್ತುತ. ಲೇಖಕರು ವಿವಿಧ ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಿ ಈ ಪುಸ್ತಕವನ್ನು ರಚಿಸಿದ್ದಾರೆ. ಆಸಕ್ತರು ಇದರ ಪರಿಪೂರ್ಣ ಪ್ರಯೋಜನವನ್ನು ಪಡೆಯುವಂತಾಗಲಿ ಎಂದು ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾ ಪೀಠದ ಅಧಿಪತಿ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಹೇಳಿದರು.

ಅವರು ಶಂಕರ ಜಯಂತಿಯಂದು ಶೃಂಗೇರಿ ಧರ್ಮಸಂಸ್ಥಾನದ ಪ್ರವಚನ ಮಂದಿರದಲ್ಲಿ ಲೇಖಕ ಡಾ। ಎಚ್.ವಿ.ನರಸಿಂಹಮೂರ್ತಿಯವರ ಐವತ್ತೆಂಟನೆಯ ಗ್ರಂಥವಾದ 'ಶ್ರೀಶಂಕರಾಚಾರ್ಯರು : ಪ್ರಶ್ನೋತ್ತರ ರೂಪದಲ್ಲಿ ಕ್ವಿಜ್' ಎಂಬ ಗ್ರಂಥವನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಶೃಂಗೇರಿಯ ರಾಷ್ಟ್ರೀಯ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ। ಶಾಸ್ತ್ರಿ ಶ್ರೀಮಠದ ಆಡಳಿತಾಧಿಕಾರಿ ಪದ್ಮಶ್ರೀ ಡಾ। ವಿ. ಆರ್.ಗೌರೀಶಂಕರ್ ಮೊದಲಾದವರು ಉಪಸ್ಥಿತರಿದ್ದರು.

ಲೇಖಕ ಡಾ। ಎಚ್.ವಿ.ನರಸಿಂಹಮೂರ್ತಿಯವರು ಪುಸ್ತಕವನ್ನು ಪರಿಚಯಿಸಿ, ಅದನ್ನು ಶ್ರೀಗಳವರಿಗೆ ಸಮರ್ಪಿಸಿ ಸ್ವಾಗತಿಸಿದರು. ಕುಂದಾಪುರದ ವಿದ್ವಾನ್ ಗಣಪತಿ ಭಟ್ಟರು ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ ಮತ್ತು ಜ್ಞಾನಭಾರತಿ ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿ ಆಚರಣೆ

''ಕೇರಳದ ಕಾಲಟಿ ಎಂಬ ಹಳ್ಳಿಯಲ್ಲಿ ಜನಿಸಿ ಸನ್ಯಾಸಿಯಾದ ಶಂಕರಾಚಾರ್ಯರು ಬಾಲ್ಯದಲ್ಲೇ ವೇದ ಉಪನಿಷಾದಿಗಳನ್ನು ಅಭ್ಯಸಿಸಿದ್ದಲ್ಲದೆ ಅವುಗಳಿಗೆ ಭಾಷ್ಯಗಳನ್ನು ರಚಿಸಿ ಕಾಲ್ನಡಿಗೆಯಲ್ಲೇ ಅಖಿಲ ಭಾರತವನ್ನು ಸಂಚರಿಸಿ ಅದೇ ಪ್ರಥಮವಾಗಿ ನಾಲ್ಕು ಮಠಗಳನ್ನು ಸ್ಥಾಪಿಸಿ ಸನಾತನ ಧರ್ಮಕ್ಕೆ ದೃಢವಾದ ಅಡಿಪಾಯ ಹಾಕಿದರು. ಇತರ ಮತ ಧರ್ಮಗಳನ್ನು ಒಂದುಗೂಡಿಸಿ ಷಣ್ಮತ ಸ್ಥಾಪನಾಚಾರ್ಯರೆನಿಸಿದರು. ಹನ್ನೆರಡು ಶತಮಾನಗಳ ಹಿಂದೆಯೇ ಏಕದೇವ ವಾದದಿಂದ ಭಾರತವನ್ನು ಒಂದುಗೂಡಿಸುವ ಮಹಾಕಾರ್ಯಗೈದ ಅವರು ಇಂದಿಗೂ ನಮಗೆ ಪ್ರಸ್ತುತರು'' ಎಂದು ''ಹಿಂದೂ ಧರ್ಮದ ಪುನರುತ್ಥಾನದಲ್ಲಿ ಆದಿಶಂಕರರ ಕೊಡುಗೆ'' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಶ್ರೀ ಉಪ್ಪುಂದ ಚಂದ್ರಶೇಖರ ಹೊಳ್ಳರು ಅಭಿಪ್ರಾಯ ಪಟ್ಟರು. ಜ್ಞಾನಭಾರತಿ ಮತ್ತು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿ ಇವರು ಶಾರದಾ ಮಂಟಪದಲ್ಲಿ ಸಂಯುಕ್ತವಾಗಿ ಏರ್ಪಡಿಸಿದ ಶಂಕರ ಜಯಂತಿ ಉತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಪ್ರವಚನ ನೀಡಿದರು. ಈ ಉತ್ಸವದ ಸಂಬಂಧವಾಗಿ ಏರ್ಪಡಿಸಿದ ಕಂಠಪಾಠದಲ್ಲಿ ಭಾಗವಹಿಸಿದ ಶ್ರೀಮತಿಯರಾದ ಜ್ಯೋತಿ ಆರ್.ಭಟ್ ಮತ್ತು ಜಯಲಕ್ಷ್ಮಿ ರಾವ್ ಅವರಿಗೆ, ರಂಗವಲ್ಲಿ ಬಿಡಿಸಿದ ಕುಮಾರಿಯರಾದ ಪವಿತ್ರಾ ಮತ್ತು ತುಳಸಿ ಕುಂಜಿಬೆಟ್ಟು ಅವರಿಗೆ, ಭಾಷಣ ಮಾಡಿದ ಕು। ಪ್ರಗತಿ ಅವರಿಗೆ ವಿಶೇಷ ಬಹುಮಾನಗಳನ್ನು ನೀಡಲಾಯಿತು.

ಅಧ್ಯಕ್ಷತೆ ವಹಿಸಿದ ಶ್ರೀ ಸಿ.ಎಸ್.ರಾವ್, ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿ ಇವರು ಶಂಕರಾಚಾರ್ಯರು ಸನ್ಯಾಸಿಗಳಿಗೆ ಮತ್ತು ಸಾಮಾನ್ಯರಿಗೆ ಅನುಶಾಸನವನ್ನು ನೀಡಿ ಮೊದಲ ಮ್ಯಾನೇಜ್‌ಮೆಂಟ್ ರೀತಿಯ ಸ್ಥಾಪಕರೆಂದು ತಾತ್ವಿಕ-ಸಾಮಾಜಿಕ ನೆಲೆಗಳೆರಡರಲ್ಲೂ ಅವರು ಅದ್ವಿತೀಯರೆಂದರು. ತೀರ್ಪುಗಾರರಾಗಿ ಸಹಕರಿಸಿದವರಲ್ಲೊಬ್ಬರಾದ ಡಾ। ಉಪ್ಪಂಗಳ ರಾಮಭಟ್ಟರನ್ನು ಸ್ಮರಣಿಕೆ, ಶಾಲು, ಪುಸ್ತಕಗಳನ್ನು ನೀಡಿ ಗೌರವಿಸಿದರು.

ಕಾರ್ಯದರ್ಶಿಗಳಾದ ಡಾ। ಎಸ್.ಎಲ್. ಕರಣಿಕ ಅವರು ಆದಿಯಲ್ಲಿ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಶ್ರೀಮತಿ ಜ್ಯೋತಿ ಅವರು ಪ್ರಾರ್ಥಿಸಿದರು. ಶ್ರೀ ವೇಣು ಗೋಪಾಲರಾವ್ ಅವರು ಕಾರ್ಯಕ್ರಮ ನಿರೂಪಿಸಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಸಹಕರಿಸಿದರು.

ಈ ಕಾರ್ಯಕ್ರಮದ ಬಳಿಕ ಶಂಕರಾಚಾರ್ಯರ ಜೀವನ ಚರಿತ್ರೆಯ 'ಶ್ರೀಶಂಕರ ವಿಜಯ' ಎಂಬ ಹೆಸರಿನ ರೂಪಕವನ್ನು ಸುಂದರವಾಗಿ ತೀರ್ಥಹಳ್ಳಿಯ ರಾಜರಾಜೇಶ್ವರಿ ನೃತ್ಯ ಕಲಾಕೇಂದ್ರದವರು ಅಭಿನಯಿಸಿದರು. ಸಂಘದ ಅಧ್ಯಕ್ಷರಾದ ಸಿ.ಎಸ್.ರಾಯರು ಹಾಗೂ ಕಾರ್ಯದರ್ಶಿಯವರಾದ ಕೃಷ್ಣಮೂರ್ತಿರಾವ್ ಬಿ. ನೃತ್ಯಗುರುಗಳಿಗೆ ಕಾಣಿಕೆ ನೀಡಿ ಗೌರವಿಸಿದರು.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (0)



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

30. ಕ್ರಿ.ಶ.1246 ಹಳೆಬೀಡು ರಂಗನಾಥ ದೇವಸ್ಥಾನದ ಶಾಸನದ ಪ್ರಕಾರ ದೋರಸಮುದ್ರ ಯೋಜೇಶ್ವರ ದೇವಳದ ಸ್ಥಾನಿಕನಾದ ಸೋಮಜೀಯನು ಮೃತಪಟ್ಟನಂತರ ರಾಜಗುರು ಚಂದ್ರಭೂಷಣದೇವ ಮತ್ತು ದೋರಸಮುದ್ರ 120 ಸ್ಥಾನಿಕರು ಸೇರಿ ಆತನ ಆಸ್ತಿಯನ್ನು ಅವನ ಹೆಂಡತಿ, ಅಳಿಯ ಮತ್ತು ಇನ್ನೋರ್ವನು- ಇವರೊಳಗೆ ವಿಂಗಡಿಸಿದರು. ಈ ವ್ಯವಸ್ಥೆಗೆ ವಿರುದ್ಧವಾಗಿ ವರ್ತಿಸುವವರು ರಾಜಗುರುವನ್ನು ಅಗೌರವಿಸಿದಂತೆಯೇ ಎಂಬುದಾಗಿ ಪರಿಗಣಿಸಲ್ಪಡುವುದೆಂದು ಅದೇ ಶಾಸನದಲ್ಲಿ ಕಂಡು ಬರುತ್ತದೆ.

31. ಹೊಯ್ಸಳ ಅರಸನಾದ ರಾಮನಾಥ ದೇವನ ಆಳ್ವಿಕೆಯ 40ನೇ ವರ್ಷದಲ್ಲಿ ರಾಜರಾಜ ಕರ್ಕಟ ಮಹಾರಾಜನ್ ಕಾಮತ್ತಾಮವರ್ ಎಂಬಾತನು ಎರಡು ಗ್ರಾಮಗಳನ್ನು ಬ್ರಾಹ್ಮಣ ಸಂತರ್ಪಣೆಗೋಸುಗ ಹೋಳಿಯನಕೆರೆ ಗ್ರಾಮದ 28 ಜನರಿಗೆ ತಾನಪತಿ (ಸ್ಥಾನಿಕರ)ಗಳ ಕರ್ತವ್ಯಗಳನ್ನು ಮಾಡುವ ಶರ್ತದ ಮೇಲೆ ಧಾರಾಪೂರ್ವಕವಾಗಿ ದಾನ ಮಾಡಿಕೊಟ್ಟನು.

32. ಬಾಬಜೀಯನ ಮಗನಾದ ಸ್ಥಾನಿಕ ಗುರುಪ್ಪನು, ಗುರುಚಿತ್ತ ದೇವನ ಮಗನಾದ ಗೆಂಗಿ ದೇವನಿಗೆ ಆಸ್ತಿಯನ್ನು ಮಾರಾಟ ಮಾಡಿದ ದಾಖಲೆ ಇದೆ. (ಮೈಸೂರು ರಾಜ್ಯದ ಮಾಗಡಿ ತಾಲೂಕಿನ ವೀರಪುರದ ಶಾಸನ)

33. ಹೊಯ್ಸಳ ಅರಸನ ಮೂರನೆಯ ನರಸಿಂಹ ದೇವನ ಕಾಲದ ಕ್ರಿ.ಶ. 1726ರ ಶಾಸನ ಇದರಲ್ಲಿ ದಾಸನೂರಿನ ಸದಸ್ಥರು ಸೇರಿ ವಿಶ್ವನಾಥ ದೇವರಿಗೆ ಶಾಶ್ವತನಂದಾದೀಪವನ್ನು ಉರಿಸುವುದಕ್ಕೂ, ದೇಗುಲದಲ್ಲಿ ಮಾಳಿಗೆ ಗೋಪುರ ರಚಿಸುವುದಕ್ಕೂ ದಾನಮಾಡಿ ಭೂಮಿಯನ್ನು ಸ್ಥಾನಿಕ ಜೀಯಾಂಡಿ ಹರ್ಪಾಂಡಿಯ ಹಸ್ತಗತ ಮಾಡಿದೆ. ಅಂತೆಯೇ ಸ್ಥಾನಪತಿಗಳಾದ ಮಾಯಿಜೀಯ ಮತ್ತು ಮಲ್ಲಜೀಯ ರಿಗೆ ನಿಟ್ಟೂರಿನ ಸ್ವಯಂಭು ಅನಂತನಾಥ ದೇವರ ಕಾರ್ಯ ನೆರಮೇರಿಸುವುದಕ್ಕೋಸ್ಕರ ದಾನವಾಗಿ ಕೊಟ್ಟ ವಿವರವು ಕ್ರಿ.ಶ.1299ರ ಶಾಸನದಲ್ಲಿ ತಿಳಿಯುತ್ತದೆ.

34. ಮಳವಳ್ಳಿ ಗ್ರಾಮದ ಕ್ರಿ.ಶ.1334ರ ಶಿಲಾಲೇಖದಲ್ಲಿ ಮಹಾಮಂಡಲೇಶ್ವರ ಸೋವೆಯ ದಣ್ಣಾಯಕನ ಮಗ ಬಳಪ್ಪ ದಣ್ಣಾಯಕನೂ, ತಲಕಾಡಿನ ಐದು ಮಠಗಳ ಮತ್ತು ಏಳು ಪಟ್ಟಣಗಳ ಸ್ಥಾನಪತಿಯಾದ ಸೋಮೆಯಣ್ಣ ಒಡೆಯಣ್ಣನೂ ಸೇರಿ ಮಾಡಿದ ಭೂದಾನ. ಕ್ರಿ.ಶ.1338ರಲ್ಲಿ ಈ ಏಳು ಪಟ್ಟಣಗಳ ಮತ್ತು ಐದು ಮಠಗಳ ಸ್ಥಾನಪತಿಯು ನಾಗ ಪಂಡಿತನ ಮಗನಾದ ಮಲಪ್ಪನೆಂಬವನಿದ್ದನು.

35. ಕ್ರಿ.ಶ.1349ರ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಕಾಂತಾವರದಲ್ಲಿ ದೊರಕಿದ ಶಿಲಾಶಾಸನದಲ್ಲಿ ಕಾಂತಾವರ ದೇವಸ್ಥಾನವನ್ನು ಸ್ಥಾನಿಕರು ಆಳುತ್ತಿದ್ದರೆಂದು ಕಂಡುಬರುತ್ತದೆ. ಈ ಸ್ಥಾನಿಕರು ಸಂಖ್ಯೆಯಲ್ಲಿ 300 ಇದ್ದು ತಮ್ಮದೇ ಆದ ಗ್ರಾಮವನ್ನು ಹೊಂದಿಕೊಂಡಿದ್ದರು. (ಕಾಂತಾವರದ ದೇವಾಲಯದ ಸ್ಥಾನಿಕರ ಮುನ್ನೂರ್ವರಂ) ಈ ಶಾಸನವು ವಿಜಯನಗರದ ಶ್ರೀಮತುಮಹಾಮಂಡಲೇಶ್ವರ ಹರಿಯಪ್ಪ ಒಡೇಯರ ಕಾಲದಲ್ಲಿ ಮಂಗಳೂರು ರಾಜ್ಯದ ವೈಸರಾಯರಾಗಿ ಹಡಪದ ಗೌತರಸನು ನೇಮಿಸಲ್ಪಟ್ಟಾಗ ಕೆತ್ತಿಸಲ್ಪಟ್ಟುದಾಗಿದೆ.

36. ಗೋಬೂರು ನರಹರಿದೇವ (ಬೇಬನಾಥ ದೇವರ ಸ್ಥಳಾಚಾರ್ಯ-ಸ್ಥಾನಿಕ)ನಿಗೆ ಕೊಡಲ್ಪಟ್ಟ ಭೂದಾನವು ನಾಲ್ಕಂಶವನ್ನೂ, ಪುರಾಣಿಕನಿಗೆ ಕೊಡಲ್ಪಟ್ಟುದು ಒಂದಂಶವನ್ನೂ ಕೂಡಿತ್ತು. (ಕ್ರಿ.ಶ.1328)

37. ಮಹಾಮಂಡಲೇಶ್ವರ ಸೋಮೆಯ ನಾಯಕನ ಮಗನಾದ ಮಲ್ಲಿನಾಥ ಒಡೆಯನು ಸ್ಥಾನಿಕ ಪುರೋಹಿತ ಸಿದ್ಧಣ್ಣನ ಮಗನಾದ ಸ್ಥಾನಿಕ ಸೋಮಣ್ಣನಿಗೆ ಬೆಮ್ಮುತ್ತನ ಕಲ್ಲು ಸಿದ್ಧನಾಥ ದೇವರ ಪರವಾಗಿ ಕ್ರಿ.ಶ.1355ರಲ್ಲಿ ಭೂದಾನವಿತ್ತನು.

38. ವಿಜಯನಗರದ ಅರಸನಾದ ಬುಕ್ಕ ರಾಯನ ಮಗನಾದ ವಿರೂಪಾಕ್ಷ ರಾಯನು ಕ್ರಿ.ಶ. 1367ರ ಶಾಸನ ಒಂದರಲ್ಲಿ ಹೀಗಿದೆ. ವಿರೂಪನ ಸಾಮ್ರಾಜ್ಯವು ಶಾಶ್ವತವಾಗುವಂತೆ 50 ನಾಡುಗಳ ಪ್ರತಿನಿಧಿಗಳು ಒಟ್ಟು ಸೇರಿ ಬಂಡಿಗನಳಿ ಗ್ರಾಮದ ಶಂಕರ ದೇವರಿಗೆ ಪೂಜೆ ಉತ್ಸವಾದಿಗಳನ್ನು ನಡೆಸಿಕೊಂಡು ಬರುವರೆ ಭೂದಾನವನ್ನು ಮಾಡಿದರು. ಮತ್ತು ಅದೇ ಶಾಸನದಲ್ಲಿ ಈ ಧರ್ಮವನ್ನು ದೇವರ ಸ್ಥಾನಿಕ ....ನೂ, ಆತನ ಮಕ್ಕಳೂ, ಮೊಮ್ಮಕ್ಕಳು ತಪ್ಪದೇ ನಡೆಸಿಕೊಂಡು ಬರಬೇಕೆಂದಿದೆ.

39. ಕ್ರಿ.ಶ.1365ರಲ್ಲಿ ಸ್ಥಾನಿಕ ತಮ್ಮಣ್ಣ ಜೀಯನು ಕೌಶಿಕ ಗೋತ್ರದ ಸೋಮಣ್ಣ ದೇವನಿಗೆ ಸೆಂಬೀಶ್ವರಂ ಉದೈಯಾರ್ ದೇವಸ್ಥಾನದಲ್ಲಿ ಇತ್ತ ದಾನವನ್ನು ವೆಪ್ಪೂರಿನ ಸಭೆಯು ಮಂಜೂರು ಮಾಡಿತ್ತು.

40. ಕೋಲಾರ್ ತಾಲೂಕಿನ ಸಿತಬೆಟ್ಟದ ಭೈರ ದೇವಸ್ಥಾನದಲ್ಲಿ ದೊರಕಿದ ಲೇಖದಲ್ಲಿ ದೇಗುಲದ ಅಧಿಕಾರಿಗೆ ಶ್ರೀಪತಿಯಾರ್ ಸ್ಥಾನತ್ತಾರ್ ಎಂಬುದಾಗಿದೆ. (ಸ್ಥಾನತ್ತಾರ್=ಸ್ಥಾನಿಕ)

41. ಮೂರನೇ ಬಲ್ಲಾಳದೇವನು ಕ್ರಿ.ಶ.1301 ರಲ್ಲಿ ಅನೇಕ ಶಾಸನಗಳನ್ನು ಕೆತ್ತಿಸಿ, ತನ್ನ ರಾಜ್ಯವು ಸುಭಿಕ್ಷೆಯನ್ನು ಹೊಂದುವಂತೆ ಮಠದ ಅಧಿಕಾರಿಗಳಿಗೂ ಎಲ್ಲಾ ನಾಡುಗಳ ಸ್ಥಾನಿಕರಿಗೂ ತೆರಿಗೆ ರಹಿತವಾದ ಭೂಮಿಯನ್ನು ದಾನ ಮಾಡಿದ ದೃಷ್ಟಾಂತವು ದಕ್ಷಿಣ ಹಿಂದೂ ದೇಶದ ಚರಿತ್ರೆಯಲ್ಲೇ ಹೆಸರನ್ನು ಗಳಿಸಿದೆ.

42. ಕಮಟೇಶ್ವರ ದೇಗುಲದ (ಚಿಕ್ಕ ಬಳ್ಳಾಪುರ ತಾಲೂಕು ನಂದಿ ಎಂಬಲ್ಲಿ) ಹನ್ನೊಂದು ನಾಡುಗಳ ಸ್ಥಾನಿಕರ ಮತ್ತು ಮಠಗಳ ಹೆಸರು ಕಂಡು ಬರುತ್ತದೆ. ಮಠಗೆಳ ಮುಖಿಗಳೂ, ತಿರುನಂದಿಯ ಕೈಲಾಸ, ದೇಗುಲದ ಸ್ಥಾನಾಧಿಪತಿಗಳೂ ಸರ್ವಮಾನ್ಯದತ್ತವಾಗಿ ಭೂಮಿಯನ್ನು ಅನುಭವಿಸುವಂತೆ ರಾಜಾಜ್ಞೆಇತ್ತು. (ಕ್ರಿ.ಶ.1301)

43. ಆಳುಪರ ರಾಜಧಾನಿಯಾದ ಬಾರಕೂರಿನ ಹತ್ತುಕೇರಿಗಳ ಪುರೋಹಿತರೂ, ಸ್ಥಾನಪತಿಗಳೂ ಕ್ರಿ.ಶ.1407-08ರ ಶಾಸನದಲ್ಲಿ ಕಂಡು ಬರುತ್ತಾರೆ. (ಬಾರಕೂರು ಹತ್ತುಕೇರಿಯ ಸ್ಥಾನಪತಿ ಚಿಕ್ಕಣ್ಣ) ಚಿಕ್ಕಣ್ಣನು ಸ್ಥಾನಪತಿಯಾಗಿ ಎರಡನೆಯ ಬುಕ್ಕರಾಯನಿಗೆ ಮಾಡಿದ ಬಿನ್ನಹ ಇದರಲ್ಲಿದೆ. ಅಂತೆಯೇ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಫಲಿಮಾರು ಗ್ರಾಮದಲ್ಲಿ ಹಿಂದಕ್ಕೆ ಶಿವಾಲಯವಿದ್ದು, ಈಗ ವೈಷ್ಣವ ದೇವಾಲಯದಲ್ಲಿ ಸಿಕ್ಕಿರುವ ಕ್ರಿ.ಶ.1401-02ರ ಶಾಸನ ಪ್ರಕಾರ ಈ ದೇವಾಲಯವು ಸ್ಥಾನಿಕರ ಆಡಳಿತೆಯಲ್ಲಿತ್ತೆಂದು ಕಂಡು ಬರುತ್ತದೆ.

44. ತೆಲುಗು ರಾಜ್ಯದಲ್ಲಿಯೂ ದೇವಸ್ಥಾನಗಳು ಸ್ಥಾನಪತಿಗಳ ಆಡಳಿತೆಯಲ್ಲಿದ್ದುದು ಕಂಡು ಬರುತ್ತದೆ. ನೆಲ್ಲೂರು ಜಿಲ್ಲೆಯ ಪೆಟ್ಲೂರಿನ ಕ್ರಿ.ಶ.1406-07ರ ಶಾಸನ ತಿಳಿಸುವಂತೆ ಅಲ್ಲಿಯ ದೇವಾಲಯವು ಮಲ್ಲಜೀಯರು ಎಂಬ ಸ್ಥಾನಪತಿಯಿಂದ ನಡೆಸಲ್ಪಡುತ್ತಿತ್ತು.

45. ವಿಜಯನಗರದ ಆಳ್ವಿಕೆಯಲ್ಲಿ ಸ್ಥಾನಿಕರು ರಾಷ್ಟ್ರದ ನೌಕರರೆಂಬುದೂ, ದೇವಸ್ಥಾನದ ಅರ್ಚಕರೂ ಹಾಗೂ ಅಧಿಕಾರಿಗಳೂ ಎಂಬುದು ತಿಳಿದು ಬರುತ್ತದೆ. ಕ್ರಿ.ಶ.1413ರಲ್ಲಿ ಎರಡನೆಯ ಹರಿಹರನ ಆಜ್ಞೆಯಂತೆ ನಿರ್ಮಿಸಲ್ಪಟ್ಟ ಲಕ್ಷ್ಮೀನಾರಾಯಣ ದೇವಸ್ಥಾನದ ಅಧಿಕಾರಿಯು ಪುರುಷೋತ್ತಮ ಮಾರ್ಯನ (ಕಾಶ್ಯಪ ಗೋತ್ರದ ವೈಖಾನಸ) ಮಗನಾದ ಸ್ಥಾನ ಸಂರಕ್ಷಕರ್ತ ಚೆನ್ನಪಾಚಾರ್ಯನಾಗಿದ್ದನು.

46. ತೀರ್ಥಹಳ್ಳಿ ತಾಲೂಕಿನ ಕುರುವಳ್ಳಿಯ ಹಾಳಾದ ಶಿಲಾಲೇಖ ಪ್ರಕಾರ ಆಳ್ವಪ್ರಭು ಬೊಮ್ಮಿಯಕ್ಕನ ಮಗನು ತನ್ನ ವಿವಾಹದ ಬಗ್ಗೆ ಕೆಲವು ನಿರ್ದಿಷ್ಟ ಭೂ ಭಾಗಗಳನ್ನು ದೇವಣ್ಣ ಅಯ್ಯನ ಮಗ ಸ್ಥಾನಿಕ ಬೋವಣ್ಣನಿಗೂ ಮಾರಿದಂತೆ ಕಂಡು ಬರುತದೆ. ಈ ಶಿಲಾಲೇಖದಲ್ಲಿ ದೇವಸ್ಥಾನದ ಹೆಸರಿಲ್ಲದಿದ್ದರೂ ಪ್ರಾಯಃ ಅದು ಶಾಸನವು ದೊರಕಿದ ಸ್ಥಳದಲ್ಲಿಯ ವಿಶ್ವೇಶ್ವರ ದೇವಸ್ಥಾನವಿರಬೇಕು.

(ಮುಂದುವರಿಯುವುದು)

## ನಿಧನ

### ಅದ್ಯಪಾಡಿ ಶ್ರೀಮತಿ ಶಾರದಮ್ಮ

ಅದ್ಯಪಾಡಿ ಶ್ರೀಮತಿ ಶಾರದಮ್ಮ ನಾರಾಯಣ ರಾವ್ ಇವರು ತಾ.12-5-2011ರಂದು ತಮ್ಮ 85ನೇ ವಯಸ್ಸಿನಲ್ಲಿ ಮುಂಬೈಯಲ್ಲಿರುವ ತಮ್ಮ ಮಗನ ಮನೆಯಲ್ಲಿ ದಿವಂಗತರಾದರು. ಇವರು ಐವರು ಪುತ್ರರು, ಮೂರು ಜನ ಪುತ್ರಿಯರು ಹಾಗೂ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

★★★ ★★★

### ಶ್ರೀ ಡಾ। ಯು.ಲಕ್ಷ್ಮೀನಾರಾಯಣ ರಾವ್

ಶ್ರೀಯುತ ಡಾ। ಯು. ಲಕ್ಷ್ಮೀನಾರಾಯಣ ರಾವ್ (93 ವರ್ಷ) ತಾ.24-5-2011ರಂದು ಬೆಂಗಳೂರಿನಲ್ಲಿ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಶ್ರೀ ಪರೀಕ ದೇವರಾವ್

ಶ್ರೀಯುತ ಪರೀಕ ದೇವರಾವ್ (82 ವರ್ಷ) ತಾ.2-6-2011ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಈರ್ವರು ಪುತ್ರರು, ಆರು ಜನ ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಚಿತ್ರಾಪುರ ವೆಂಕಟರಾವ್

ಚಿತ್ರಾಪುರ ವೆಂಕಟರಾವ್ (90 ವರ್ಷ) ಇವರು ವೃದ್ಧಾಪ್ಯದಿಂದ ತಾ.9-6-2011ರಂದು ಸ್ವಗೃಹದಲ್ಲಿ ನಿಧನರಾದರು. ಇವರು ಹೊಸಬೆಟ್ಟು, ಸೂರಿಂಜೆ, ತಣ್ಣೀರುಬಾವಿ ಶಾಲೆಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು ಇವರನ್ನು ಹೊಸಬೆಟ್ಟು ಶಾಲೆಯಲ್ಲಿ ಸನ್ಮಾನಿಸಲಾಗಿತ್ತು. ಇವರು ನಾಲ್ವರು ಪುತ್ರರು, ಆರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ವೇದಾವತಿಯಮ್ಮ

ಹೆಜಮಾಡಿ ದಿ। ಸುಂದರರಾಯರ ಪತ್ನಿ ಶ್ರೀಮತಿ ವೇದಾವತಿ ಅಮ್ಮ (83 ವರ್ಷ) ತಾ.13-5-2011ರಂದು ಅಸೌಖ್ಯದ ಕಾರಣದಿಂದ ನಿಧನರಾದರು. ಮೃತರು ಮೂವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಗಿರಿಜಮ್ಮ

ಪಡುಆಲೆವೂರು ದುರ್ಗಾಪರಮೇಶ್ವರಿ ದೇವಸ್ಥಾನದ ಬಳಿಯ ನಿವಾಸಿ, ನಾಟಿವೈದ್ಯೆ ಶ್ರೀಮತಿ ಗಿರಿಜಮ್ಮನವರ ಅಸೌಖ್ಯದಿಂದ ಮೇ.30ರಂದು ತಮ್ಮ 86ನೇ ವಯಸ್ಸಿನಲ್ಲಿ ಸ್ವಗೃಹದಲ್ಲಿ ನಿಧನ ಹೊಂದಿದರು. ಇವರು ಐವರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ತಾಳೆಪ್ಪಾಡಿ ಜಯರಾಮ ರಾವ್

ಉಚ್ಚಿಲದಲ್ಲಿ ವಾಸ್ತವ್ಯದಲ್ಲಿದ್ದ ಶ್ರೀ ತಾಳೆಪ್ಪಾಡಿ ಜಯರಾಮರಾಯರು (62 ವರ್ಷ) ತಾ.1-6-2011ರಂದು ನಿಧನರಾಗಿರುತಾರೆ. ಇವರು ಪತ್ನಿ, ಮಗ, ಮಗಳು, ಅಳಿಯ ಹಾಗೊ ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ.

## ಹನಿಗವನಗಳು

### ಕಡಲು ಅಪ್ಯಾಯಮಾನ

ತೀರಕ್ಕೆ ಅಪ್ಪಳಿಸಿ ಬರುವ ಅಲೆ
ಕಡಲಿನ ರಮಣೀಯ ಕಲೆ
ಹಾಲನೊರೆಯಲಿ ತೊರೆಯ ಅಬ್ಬರ
ನುಗ್ಗಿ ಬರುತ್ತಿದೆ ನಮ್ಮೆಡೆಗೆ ತೆರೆ

ಮುಸ್ಸಂಜೆಯ ಹೊತ್ತಲಿ ಹೊನ್ನಿನ ಸೂರ್ಯ
ಕಡಲಿಗೆ ಚೆಲ್ಲಿದ ಕೆಂಪನೆ ಬಣ್ಣ
ಕಡಲ ನೀರಲಿ ಕಂಗೊಳಿಸುವ ಸೂರ್ಯ
ಕಣ್ಣಿಗೂ ಮನಕು ಸುಂದರ ವರ್ಣ

ಕಡಲ ಮೇಲಿಂದ ಬೀಸುವ ತಂಗಾಳಿ
ಮೈ ಮನಕ್ಕೆ ಹಿತ ಸ್ಪರ್ಶ
ತೇಲಿ ಬರುವ ದೋಣಿಗಳ ದೃಶ್ಯ
ಮನಕ್ಕೆ ತರುವುದು ಹರ್ಷ

ಕಡಲ ತೀರದಲ್ಲಿ ಅಲೆಯ ಅಬ್ಬರ
ಕಡಲ ಮಧ್ಯ ಬಲು ಶಾಂತ
ಕಡಲಮುತ್ತು ಜಲಚರಗಳ ಖಣಿ
ನೋಡಿದಷ್ಟು ಕಡಲು ಶ್ರೀಮಂತ

ಶ್ರೀಮಂತಕಡಲು ಅಪ್ಯಾಯಮಾನ
ಒಮ್ಮೊಮ್ಮೆ ಕಳೆದು ಬಿಡುವುದು ಪ್ರಾಣ
ಸುನಾಮಿ ರೂಪದಲ್ಲಿ ಕಡಲ ಒಡಲು
ಭೀಕರ ರೌದ್ರ ಹರಣ.

ಸುಂದರ ಕಡಲು ಪ್ರಕೃತಿಯ ಮಡಿಲು
ಆಗಲಿ ನೆಮ್ಮದಿಯ ತಾಣ
ಮಾನವನ ಬದುಕಿಗೆ ನೀಡಲಿ ಕಡಲು
ಕಳೆಯದಿರಲಿ ಜೀವಿಗಳ ಪ್ರಾಣ

### ಮನವು ಧನ್ಯ

ಪ್ರಕೃತಿ ಮಾತೆ ನಿನ್ನ ಚೆಲವು ಕಂಡು
ಮೂಕವಿಸ್ಮಿತನಾದೆ
ತಾಯಿ ನಿನ್ನ ಅದ್ಭುತ ಸೃಷ್ಟಿಗೆ
ಮನವು ಧನ್ಯವಾಗಿದೆ.

ಗಗನಕ್ಕೆತ್ತರ ಚಾಚಿ ನಿಂತ
ನಿನ್ನ ಬೃಹತ್ ಬೆಟ್ಟಗುಡ್ಡ
ಪಾತಾಳಕ್ಕಿಂತ ಆಳಕ್ಕಿಳಿದ
ಕಂದಕದಂತ ದುರ್ಗ.

ಶಿಖರದಮೇಲೆ ಜಲದ ಬುಗ್ಗೆ
ಪ್ರಕೃತಿ ನಿನ್ನ ವೈಚಿತ್ರ್ಯ
ಮೇಲಿಂದ ಕೆಳಗೆ ಧುಮುಕುವ ಧಾರೆ
ನಿನ್ನ ಪಾದ ಸ್ಪರ್ಶ

ಹಸಿರ ಕಾನನ ಪ್ರಾಣಿ ಸಂಕುಲ
ಬೀಸುವ ಗಾಳಿಯ ಸಂಚಲನ
ಸ್ವಚ್ಛ ನೀರು ನಿಚ್ಚ ನಿಸರ್ಗ
ತಾಯಿ ನಿನ್ನ ದಾನ

ಪ್ರಕೃತಿ ಮಾತೆಯೇ ನೀನು ಕೊಟ್ಟ
ಪರಿಸರ ನಮಗೆ ಅಮೂಲ್ಯ
ಹಾಳು ಮಾಡದೇ ಉಳಿಸಿಕೊಳ್ಳುವ
ತಾಯಿ ಇಗೋ ನಿನಗೆ ಅರ್ಘ್ಯ

ಪ್ರಕೃತಿ ನಿನಗೆ ಸಾಟಿಯೇ ಇಲ್ಲ
ವರ್ಣಿಸಲು ಪದಗಳೇ ಮೌನ
ನಿನ್ನ ಕೊಡುಗೆಗ ನಿತ್ಯ ತೊಡುಗೆಗೆ
ತಾಯಿ ನಿನಗೆ ನಮನ

### ಸುಡುವ ಬಿಸಿಲು

ಎಂಥ ಧಗೆ ಎಂಥ ಭೇಗೆ
ಸುಡುವ ಸುರಿವ ಬಿಸಿಲು,
ಎಲ್ಲಿ ನೋಡಿ ಎಲ್ಲಿ ಹೋಗಿ
ಬಿಸಿಲ ಜೊತೆಗೆ ದೂಳು

ಸೂರ್ಯನ ಪ್ರಖರ ತೀವ್ರವಾಗಿದೆ
ಭೂಮಿ ಬಳಲಿ ಬೆಂಡು
ಬಾಯಿ ಒಣಗಿ ನೀರ ಬಯಸಿ
ಆಗಸದತ್ತ ಭೂಮಿ ಗೋಣು

ಇದ್ದ ಮರವ ಕಡಿದು ಆಗಿದೆ
ಬಟ್ಟಂಬಯಲು ನೆಲೆ,
ಎಲ್ಲೆಡೆ ಕಾಂಕ್ರಿಟ್ ಮೋಟಾರು ಹೊಗೆ
ಭೂಮಿ ಕಾದ ಬಾಣಲೆ

ಬಿಸಿಲು ಕಾಲ ರುದ್ರ ನೇತ್ರ
ಕಾದ ಭೂಮಿ ಬಿಸಿ
ತಂಪು ಗಾಳಿ ನೆರಳ ಆಸರೆ
ನೆಡಬೇಕಾಗಿತ್ತು ಅಲ್ಲಿ ಸಸಿ

ಹೇ ಮಳೆರಾಯ ಬಂದ ಬಿಡು
ಭೂಮಿ ತಂಪ ಗೊಳಿಸು
ಹಸಿರ ಶ್ಯಾಮಲೆ ಉಸಿರ ಗಾಳಿ
ಮಲಯ ಮಾರತ ಬೀಸು

-ಮಾರ್ಪಳ್ಳಿ ಆರ್. ಮಂಜುನಾಥ್

# ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ

- ಡಾ। ಎಚ್.ವಿ.ನರಸಿಂಹಮೂರ್ತಿ, ವಿಶ್ರಾಂತ ಪ್ರಾಧ್ಯಾಪಕರು, ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ...)

ಈ ಕ್ರಯದಾನದಿಂದಾಗಿ ಮೂಲಗೇಣಿ ಒಡೆತನ ಶೃಂಗೇರಿಮಠಕ್ಕೆ ಸೇರಿತು. ವಡೇರಿಗೆ (ಶ್ರೀನರಸಿಂಹ ಭಾರತೀ ವಡೇರು) ಸೇರಿದ ಹೋಬಳಿಯಾದ್ದರಿಂದ ಈ ಸ್ಥಳಕ್ಕೆ ಇಂದಿಗೂ 'ವಡೇರ ಹೋಬಳಿ' ಎಂದೇ ಹೆಸರು. ನರಸಿಂಹ ಭಾರತೀ ವಡೆಯರು ಈ ಬ್ರಹ್ಮಾದಾಯದ ಮೂಲ ಕ್ರಯದಾನವನ್ನು ವಾಸ್ತೇವ (ವಾಸುದೇವ) ವೈಯಿದ್ಯ, ನಾರಾಯಣ ವೈಯಿದ್ಯ ಮತ್ತು ವಿಷ್ಣುಸಭಾಯಿತನ ಮಕ್ಕಳಾದ ನಾರಾಯಣ ಸಭಾಯಿತ ಮತ್ತು ಪೇರಾಳಸಭಾಯಿತರಿಂದ ಪಡೆದರು. ಆ ಸಮಯದಲ್ಲಿ ಚಕ್ರವರ್ತಿ ಇಮ್ಮಡಿ ಬುಕ್ಕರಾಯ ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ. ಈತನ ನಿರೂಪದಿಂದ ರಾಜ್ಯಪಾಲ ಬಾಚಣ ವಡೆಯ ಬಾರಕೂರು ರಾಜ್ಯವನ್ನು ಆಳುತ್ತಿದ್ದ. ಶ್ರೀನರಸಿಂಹಭಾರತೀ ವಡೆಯರ ಉಲ್ಲೇಖ ಬಸ್ರೂರಿನ ಕ್ರಿ.ಶ.1400ರ ಶಾಸನ ವೊಂದರಲ್ಲೂ ಇದೆ. ಅಲ್ಲದೆ ಜಿಲ್ಲೆಯ ಅನೇಕಸ್ಥಳ ಗಳಲ್ಲಿ ಶೃಂಗೇರಿ ಧರ್ಮಸಂಸ್ಥಾನ ಮತ್ತು ದಕ್ಷಿಣ ಕನ್ನಡ ನಡುವಿನ ಸಂಬಂಧ ಸೂಚಿಸುವ ಅನೇಕ ತಾಮ್ರ ಹಾಗೂ ಶಿಲೆಯ ಶಾಸನಗಳು ದೊರಕುತ್ತವೆ.

**ತೀರ್ಥಕ್ಷೇತ್ರ ಸಂದರ್ಶನ**

ಸಾಮಾನ್ಯವಾಗಿ ಶೃಂಗೇರಿ ಜಗದ್ಗುರುಗಳೆಲ್ಲರೂ ತಮ್ಮ ಸಂಚಾರಕಾಲದಲ್ಲಿ ದಕ್ಷಿಣ ಕನ್ನಡದ ತೀರ್ಥ ಕ್ಷೇತ್ರಗಳಿಗೆ ಭೇಟಿ ನೀಡುತ್ತಿದ್ದರು. ದ್ವಿತೀಯ ಸಚ್ಚಿದಾನಂದ ಭಾರತೀ ಸ್ವಾಮಿಗಳವರು (ಕ್ರಿ.ಶ.1705-1741) ಕೊಕ್ಕಡ, ಬಿಳೆನೆಲೆ, ಸುಬ್ರಹ್ಮಣ್ಯ, ಬೆಳ್ಳಾರೆ, ಉಪ್ಪಿನಂಗಡಿ, ನಂದಾವರ, ಮಂಗಳೂರು, ಕದ್ರಿ, ಕುಡುಪು, ಕಾಂತಾವರ, ಕಾರ್ಕಳ, ಹೆಬ್ರಿ, ಹಾಲಾಡಿ, ಕೋಟೇಶ್ವರ, ಕುಂಭಕಾಶಿ, ಕುಂದಾಪುರ, ಬಸ್ರೂರು, ಬಳ್ಕೂರು, ಗಂಗೊಳ್ಳಿ, ಕಿರಿಮಂಜೇಶ್ವರ, ಬೈಂದೂರುಗಳಲ್ಲಿ ವ್ಯಾಪಕವಾಗಿ ಸಂಚಾರ ಮಾಡಿ, ಭಟ್ಕಳ ಮೂಲಕ ಗೋಕರ್ಣದ ಕಡೆಗೆ ಯಾತ್ರೆ ಹೋದ ಉಲ್ಲೇಖ ಗುರುವಂಶಕಾವ್ಯದಲ್ಲಿದೆ (ಗು.ವಂ.ಕಾ.14ನೇ ಸರ್ಗ). ಸ್ವಾಮಿಗಳವರು ಕಾರಿಂಜ ಕ್ಷೇತ್ರದಲ್ಲಿ ಮೊಕ್ಕಾಂ ಮಾಡಿದ್ದಾಗ ಮಾಧ್ವಯತಿಗಳು ಅವರನ್ನು ಉಡುಪಿಗೆ ದಯಮಾಡಿಸುವಂತೆ ಆಹ್ವಾನಿಸಿದರು. ಅವರ ಗೌರವಪೂರ್ವಕ ನಿಮಂತ್ರಣಕ್ಕೆ ಮಾನ್ಯತೆ ನೀಡಿದ ಶ್ರೀಗಳವರು ಉಡುಪಿಗೆ ಚಿತ್ತೈಸಿದಾಗ ಮಾಧ್ವಮಠದ ಸ್ವಾಮಿಗಳವರು ಅವರನ್ನು ಗೌರವದಿಂದ ಸ್ವಾಗತಿಸಿದರು. ಶ್ರೀಕೃಷ್ಣನ ದರ್ಶನ ಮಾಡಿ, ಸ್ವತಹ ಶ್ರೀಕೃಷ್ಣನ ಪೂಜೆ ನೆರವೇರಿಸಿ, ಮಾಧ್ವಯತಿಗಳಿಂದ ವಿಶೇಷವಾದ ಗೌರವಸಮ್ಮಾನ ಪೂರ್ವಕವಾದ ಸತ್ಕಾರವನ್ನು ಸ್ವೀಕರಿಸಿದರೆಂದು ಈ ಕಾವ್ಯವು ತಿಳಿಸುತ್ತದೆ. (.....ತಥೋಡುಪಂ ಗ್ರಾಮಮಥಪ್ರತಸ್ಥೇ॥ ಸಂಪ್ರಾರ್ಥಿತೋ ಮಾಧ್ವಯತೀಶ್ವರೇಣ ಕೃಷ್ಣಂ ದಿದೃಕ್ಷುಃ ಕಮನಿಯ ತೀಷಮ್। ಅಮುಂ ಸಮಭ್ಯಚನ್ಯ ಮಹಾದರೇಣ ಸಂಮಾನಿತಸ್ತೇನ ಯತೀಶ್ವರೇಣ ॥ ಗು.ವಂ.ಕಾ. 17ನೇ ಸರ್ಗ: 9-10)

ಕುಂದಾಪುರ ತಾಲೂಕಿನ ಹಾಲಾಡಿ ಗ್ರಾಮದಲ್ಲಿ ಶ್ರೀನರಸಿಂಹ ಭಾರತೀ ಸ್ವಾಮಿಗಳವರು (ಕ್ರಿ.ಶ.1389-1408) ತಮ್ಮ ಗೋಕರ್ಣ ಯಾತ್ರೆಯ ಸಂದರ್ಭದಲ್ಲಿ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯನ್ನು ಪ್ರತಿಷ್ಠಾಪಿಸಿ, ಒಂದು ಶಾಖಾ ಮಠವನ್ನು ಸ್ಥಾಪಿಸಿದರು. ಹಾಗಾಗಿ ಇವರಿಗೆ ಈ ಸೀಮೆಯಲ್ಲಿ 'ಹಾಲಾಡಿ ಒಡೆಯರು' ಎಂದು ವಿಶೇಷ ಗೌರವವಿತ್ತು. ಶ್ರೀ ಪುರುಷೋತ್ತಮ ಭಾರತೀ ಸ್ವಾಮಿಗಳವರು (ಕ್ರಿ.ಶ.1408-1448) ಹಾಲಾಡಿಗೆ ಆಗಮಿಸಿ, ತಮ್ಮ ಗುರುಗಳು ಪ್ರತಿಷ್ಠಾಪಿಸಿದ ಲಕ್ಷ್ಮೀನೃಸಿಂಹಸ್ವಾಮಿಗೆ ಪೂಜೆ ಸಲ್ಲಿಸಿದ್ದರು. ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಉಡುಪಿಯಿಂದ ಹಾಲಾಡಿಗೆ ಚಿತ್ತೈಸಿ ಲಕ್ಷ್ಮೀನೃಸಿಂಹನ ಪೂಜೆಯಲ್ಲಿ ತತ್ಪರರಾಗಿ ಅಲ್ಲೇ ಸ್ವಲ್ಪ ದಿನಗಳ ಕಾಲ ತಂಗಿದ್ದರು. (ಹಾಲಾಡಿ ಸಂಜ್ಞಂ ಪುರಮಾಪಯೋಗೀ ಲಕ್ಷ್ಮೀನೃಸಿಂಹೋ ವಿರರಾಜಯತ್ರ, ತತ್ರೈವಕಾಂಶ್ಚಿದ್ದಿವಸಾನುಷಿತ್ವಾ ಲಕ್ಷ್ಮೀನೃಸಿಂಹಾರ್ಚನ ತತ್ಪರಃ ಸನ್॥ ಗು.ವಂ.ಊ.17ನೇ ಸರ್ಗ: 10-11)

ಶ್ರೀಶಾರದಾ ಪೀಠದ ಗುರುಪರಂಪರೆಯಲ್ಲಿ ಇಪ್ಪತ್ತೆಂಟನೆಯವರಾದ ಶ್ರೀ ಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರು (ಕ್ರಿ.ಶ.1741-1767), ಮುವ್ವತ್ತೈದನೆಯವರಾದ ಶ್ರೀಮದಭಿನವವಿದ್ಯಾ ತೀರ್ಥ ಮಹಾಸ್ವಾಮಿಗಳವರು (ಕ್ರಿ.ಶ.1954-1989) ಮತ್ತು ಪ್ರಸ್ತುತ ಶ್ರೀಶಾರದಾ ಪೀಠವನ್ನು ಅಲಂಕರಿಸಿರುವ ಶ್ರೀಭಾರತೀ ತೀರ್ಥಮಹಾ ಸ್ವಾಮಿಗಳವರು ಇವರೆಲ್ಲ ಹಾಲಾಡಿಯ ದೇವಾಲಯವನ್ನು ಸಂದರ್ಶಿಸಿ ಶ್ರೀ ಲಕ್ಷ್ಮೀನೃಸಿಂಹ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಜಗದ್ಗುರು ಶ್ರೀಭಾರತೀತೀರ್ಥ ಮಹಾಸ್ವಾಮಿಗಳವರು ತಮ್ಮ ಸಂದರ್ಶನ ಕಾಲದಲ್ಲಿ ಶ್ರೀಲಕ್ಷ್ಮೀನೃಸಿಂಹ ಸ್ವಾಮಿಯ ಶಾಶ್ವತ ನಿತ್ಯಪೂಜಾನಿಧಿ ಮತ್ತು ಶಿಥಿಲ ವಾದ ಬ್ರಹ್ಮರಥದ ಪುನರ್ನಿರ್ಮಾಣಕ್ಕೆ ಸೂಕ್ತ ವ್ಯವಸ್ಥೆ ಮಾಡಿರುತ್ತಾರೆ. ಶ್ರೀಮಠದ ಹಳೇ ದಾಖಲೆಗಳು ಹಾಲಾಡಿಯನ್ನು 'ನೃಪದತ್ತಪುರಂ' (ರಾಜನಿಂದ ದಾನಕೊಡಲ್ಪಟ್ಟ ನಗರ) ಎಂಬುದಾಗಿ ಸೂಚಿಸುತ್ತದೆ.

ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ತಮ್ಮ ಸಂಚಾರಕಾಲದಲ್ಲಿ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಆಗಮಿಸಿದಾಗ ಸ್ವಾಮಿಗಳವರು ಕ್ಷೇತ್ರವನ್ನು ಪ್ರವೇಶಿಸಬಾರದೆಂದು ವಿಘ್ನ ಸಂತೋಷಿಗಳೂ, ಅನ್ಯಮತಸಂಪ್ರದಾಯದವರೂ ಆದ ಕೆಲವರು ತಡೆಯಲು ಪ್ರಯತ್ನಿಸಿ ವಿಫಲರಾದರು. ಶ್ರೀ ಶ್ರೀಗಳವರು ಭುಜಂಗರೂಪದಲ್ಲಿದ್ದ ಶ್ರೀ ಸುಬ್ರಹ್ಮಣ್ಯೇಶ್ವರನನ್ನು ಸ್ವತಹ ಪೂಜಿಸಿದರು. ಚಂಪಾಷಷ್ಠಿಯಂದು ನಡೆದ ಮಹಾರಥೋತ್ಸವ ದಲ್ಲಿ ಭಾಗವಹಿಸಿ, ಸ್ವಾಮಿಯನ್ನು ಅನೇಕ ಸ್ತೋತ್ರಗಳಿಂದ ಸ್ತುತಿಸಿ, ಲೋಕಕ್ಷೇಮವನ್ನು ಪ್ರಾರ್ಥಿಸಿದರು. ಅಲ್ಲಿನ ಶಿಷ್ಯರ ಕೋರಿಕೆಯಂತೆ ಒಂದು ಮಠವನ್ನು ಸ್ಥಾಪಿಸಿದರು. ಅದು ಈಗಲೂ ಈ ದೇವಾಲಯದ ಆವರಣದಲ್ಲಿಯೇ ಇದೆ.

ಶ್ರೀರಾಮಚಂದ್ರಭಾರತೀ ಸ್ವಾಮಿಗಳವರು (ಕ್ರಿ.ಶ.1517-1560) ಒಮ್ಮೆ ಕಾರ್ಕಳಕ್ಕೆ ಸಂದರ್ಶನವಿತ್ತಾಗ ಅಲ್ಲಿಯ ಜೈನರು ಅವರ ದೇವಸ್ಥಾನದಲ್ಲಿ ಪೂಜೆ ಮಾಡಲು ಗುರುಗಳನ್ನು ಒತ್ತಾಯಿಸಿದರು. ಆದರೆ ಜಗದ್ಗುರುಗಳವರ ತಪಸ್ಸಿನ ಮಹಿಮೆಯಿಂದ ಅಲ್ಲಿಯ ಮೂರ್ತಿಯು ಶ್ರೀಪದ್ಮನಾಭಮೂರ್ತಿಯಾಗಿ ಮಾರ್ಪಟ್ಟಿತು. ಈ ಅದ್ಭುತವನ್ನು ಕಂಡ ಜನರೆಲ್ಲರೂ ಬಹಳ ಆಶ್ಚರ್ಯಪಟ್ಟು ಜಗದ್ಗುರುಗಳ ತಪೋಮಹಿಮೆಗೆ ತಲೆಬಾಗಿದರು. 'ಅನಂತಶಯನ ದೇವಸ್ಥಾನ' ವೆಂದು ಪ್ರಸಿದ್ಧವಾದ ಈ ದೇವಸ್ಥಾನ ಕಾರ್ಕಳದ ಪ್ರಮುಖ ದೇವಾಲಯಗಳಲ್ಲಿ ಒಂದು.

**ಶಿಷ್ಯಸ್ತೋಮ**

ಅವಿಭಕ್ತದಕ್ಷಿಣಕನ್ನಡದುದ್ದಕ್ಕೂ ಇಂದು ಶೃಂಗೇರಿ ಶ್ರೀಮಠದ ಶಿಷ್ಯಸ್ತೋಮವಿದೆ. ಪ್ರಾಯಶಃ ಹಿಂದೊಮ್ಮೆ ಇಲ್ಲಿನ ಬಹುಪಾಲು ಜನ ಶ್ರೀಮಠದ ಶಿಷ್ಯರಾಗಿದ್ದು, ನಂತರ ಅನ್ಯಮತಸ್ಥರ ಆಶೆ-ಆಮಿಷ, ಒತ್ತಾಯಗಳಿಗೆ ಮಣಿದು ಕೇವಲ ಕೆಲಮಂದಿ ಮಾತ್ರ ತಮ್ಮ ನಿಷ್ಠೆಯನ್ನು ಬದಲಾಯಿಸಿರಬಹುದು. ಆದರೂ ಅವರಲ್ಲಿನ ಅನೇಕ ಮಂದಿ ತಮ್ಮ ಪೂರ್ವಜರು ಸ್ಮಾರ್ತಸಂಪ್ರದಾಯದವರು; ಶೃಂಗೇರಿಯ ಗುರುಪೀಠವನ್ನು ತಲೆ-ತಲಾಂತರ ದಿಂದ ನಂಬಿದವರು-ಎಂದು ಇಂದಿಗೂ ಹೇಳಿಕೊಳ್ಳುತ್ತಾರೆ. ಮಹಾರಾಷ್ಟ್ರದ ರತ್ನಗಿರಿಯ ಕಡೆಯಿಂದ ಒಂದು, ತುಳುನಾಡಿನ ಕಾರ್ಕಳ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಹೆಚ್ಚಾಗಿ ನೆಲೆಸಿದ ಚಿತ್ಪಾವನರೆಂಬ ಸ್ಮಾರ್ತಬ್ರಾಹ್ಮಣರು ಇಂದಿಗೂ ತಮ್ಮ ನಿಷ್ಠೆಯನ್ನು ಬದಲಾಯಿಸಲಿಲ್ಲ. ಅವರು ಶೃಂಗೇರಿಧರ್ಮಸಂಸ್ಥಾನದ ವಿನೀತ ಶಿಷ್ಯರು. ಮಹಾರಾಷ್ಟ್ರದಿಂದ ಬಂದು ಅಶ್ವತ್ಥಪುರ-ಮೂಡುಬಿದಿರೆಯ ಕಡೆ ನೆಲೆಸಿದ ದೇಶಸ್ಥ ಬ್ರಾಹ್ಮಣರು ಪರಂಪರಾಗತವಾಗಿ ಶ್ರೀಮಠವನ್ನು ನಂಬಿ ನಡೆದುಕೊಳ್ಳುವವರು. ಸತಾರಾ ಪ್ರಾಂತ್ಯದಿಂದ ತುಳುನಾಡಿಗೆ ಬಂದ ಖರಾಡಿ ಬ್ರಾಹ್ಮಣರು ಸಹ ಶೃಂಗೇರಿ ಮಠದ ಶಿಷ್ಯರೇ. 'ಸ್ಥಾನಾಧಿಪತಿಗಳು' ಎಂದೇ ಪ್ರಸಿದ್ಧರಾಗಿದ್ದ ಸ್ಥಾನಿಕ ಬ್ರಾಹ್ಮಣರ ನಿಷ್ಠೆಯನ್ನಂತೂ ಪ್ರಶ್ನಿಸುವಂತೆಯೇ ಇಲ್ಲ. ಅವರಿಗೂ ಶೃಂಗೇರಿ ಶ್ರೀಶಾರದಾ ಪೀಠಕ್ಕೂ ಇರುವ ಸಂಬಂಧ ಅವಿನಾಭವವಾದುದು. ಸ್ಮಾರ್ತ ಶಿವಳ್ಳಿ ಬ್ರಾಹ್ಮಣರ ಮಠವಾದ ಬಾಳೆಕುದ್ರು ಮತ್ತು ಎಡನೀರು ಮಠಗಳ ಸ್ವಾಮಿಗಳವರು ಮತ್ತು ಅವರ ಶಿಷ್ಯರು ಶೃಂಗೇರಿ ಶ್ರೀಶಾರದಾಪೀಠದೊಂದಿಗೆ ಉತ್ತಮ ಸಂಬಂಧವನ್ನಿರಿಸಿಕೊಂಡಿದ್ದಾರೆ. ಬಾಳೆಕುದ್ರು ಶ್ರೀಮಠದ ಇಂದಿನ ಸ್ವಾಮಿಗಳವರು ಪೂರ್ವಾಶ್ರಮದಲ್ಲಿ ಶೃಂಗೇರಿ ಪಾಠಶಾಲೆಯಲ್ಲಿ ಅಧ್ಯಯನ ಮಾಡಿದವರು. ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಅವರ ಪೀಠಾರೋಹಣ ಸಂದರ್ಭದಲ್ಲಿ ಉಪಸ್ಥಿತರಿದ್ದು ಅವರಿಗೆ 'ನೃಸಿಂಹಾಶ್ರಮ' ಎಂಬ ಯೋಗಪಟ್ಟವನ್ನು ಅನುಗ್ರಹಿಸಿದ್ದಾರೆ. ವಿಶ್ವಕರ್ಮ ಸಮಾಜದವರ ವಿನಂತಿಯಂತೆ ಉಡುಪಿ ಸಮೀಪದ ಕಟಪಾಡಿ ಮಠದ ಉತ್ತರಾಧಿಕಾರಿಗಳ ಪೀಠಾರೋಹಣ ಪ್ರಕ್ರಿಯೆಗೆ ಮಾರ್ಗದರ್ಶನ ಮಾಡಿ, ತಾವೇ ಸ್ವತಹ ಚಿತ್ತೈಸಿ, ದಿವ್ಯಸಾನಿಧ್ಯ ನೀಡಿ ಅವರನ್ನು ಆಶೀರ್ವದಿಸಿದ್ದಾರೆ.

ರಾಮಕ್ಷತ್ರಿಯ ಸಮಾಜದವರು ಕೆಳದಿಯ ವೀರಭದ್ರಪ್ಪನ ಕಾಲದಿಂದಲೂ ಶ್ರೀಮಠದ ಶಿಷ್ಯರಾಗಿ ಅಭ್ಯುದಯ ಹೊಂದುತ್ತಿದ್ದಾರೆ. ಮತಾಂತರಕ್ಕೆ ಹೆದರಿ ಗೋವೆಯಿಂದ ಕುಂದಾಪುರದ ಕರಾವಳಿ ತೀರಕ್ಕೆ ವಲಸೆಬಂದು, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ನೆಲಸಿರುವ ಕೊಂಕಣ ಖಾರ್ವಿ ಸಮಾಜದವರು ಶ್ರೀಮಠದ ನಿಷ್ಠಾವಂತ ಶಿಷ್ಯರು. ಸರಸ್ವತೀ ನದೀ ತೀರದಲ್ಲಿ ದಕ್ಷಿಣಾಭಿ ಮುಖವಾಗಿ ಐತಂದು, ಗೋವಾದ ಕುಶಸ್ಥಳ ಎಂಬಲ್ಲಿ ನೆಲಸಿ, ತುಳುನಾಡಿನಲ್ಲೆಲ್ಲ ಹರಡಿಕೊಂಡಿರುವ ಸಾರಸ್ವತರು ಸ್ಮಾರ್ತ ಸಂಪ್ರದಾಯದವರು; ಮೂಲತಃ ಶೃಂಗೇರಿ ಮಠದ ಶಿಷ್ಯರು. ಉತ್ತರ ಕನ್ನಡದ ಚಿತ್ರಾಪುರ (ಶಿರಾಲಿ) ಎಂಬಲ್ಲಿ ತಾವು ಒಂದು ಮಠ ಸ್ಥಾಪಿಸಿ ಕೊಂಡಿದ್ದಾಗ್ಯೂ, ಶೃಂಗೇರಿ ಮಠಕ್ಕೂ ತಮಗೂ ಇರುವ ಸಂಬಂಧವನ್ನು ಇಂದಿಗೂ ಅವರು ಮರೆತಿಲ್ಲ. ಈ ಮಠದ ಇಂದಿನ ಅಧಿಪತಿಗಳ ಪೀಠಾರೋಹಣ ನಡೆದದ್ದು, ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲೇ. ಗೌಡದೇಶದಿಂದ ಕೊಂಕಣಕ್ಕೆ ಬಂದು ನೆಲಸಿ, ಕ್ರಿ.ಶ.1506ರ ಹೊತ್ತಿಗೆ ಪೋರ್ಚುಗೀಸರು ಗೋವೆಯನ್ನು ಬಲಾತ್ಕಾರ ದಿಂದ ಸೆಳಕೊಂಡಾಗ ಮತಾಂತರಕ್ಕೆ ಹೆದರಿ ತುಳುನಾಡಿಗೆ ವಲಸೆ ಬಂದು ಗೌಡಸಾರಸ್ವತರು ಮೂಲತಃ ಸ್ಮಾರ್ತರೂ, ಶಾಕ್ತರೂ, ಶೈವರೂ ಆಗಿದ್ದು, ಹದಿಮೂರನೆಯ ಶತಮಾನದ ನಂತರ ಅವರಲ್ಲಿ ಕೆಲವರು ತಮ್ಮ ನಿಷ್ಠೆಯನ್ನು ಬದಲಾಯಿ ಸಿರಬೇಕು. ಇಂದಿಗೂ ಅವರಲ್ಲಿ ಸ್ಮಾರ್ತಸಂಪ್ರ ದಾಯದ ಒಂದು ಪಂಗಡ ಪ್ರತ್ಯೇಕ ಮಠ ಹೊಂದಿದ್ದರೂ ಸಹ ಶೃಂಗೇರಿ ಪೀಠದ ತಮ್ಮ ಸಂಬಂಧವನ್ನು ಮರೆತಿಲ್ಲ. ಅಲ್ಲದೆ ಜಿಲ್ಲೆಯಾದ್ಯಂತ ವ್ಯಾಪಿಸಿರುವ ದೈವಜ್ಞ ಮತ್ತು ಆರ್ಯವೈಶ್ಯ ಸಮಾಜದವರು ಉತ್ತರ ಕನ್ನಡದ ಹೊನ್ನಾವರದ ಬಳಿ ತಮ್ಮದೇ ಆದ ಮಠಗಳನ್ನು ಸ್ಥಾಪಿಸಿ ಕೊಂಡಿದ್ದಾಗ್ಯೂ, ಶೃಂಗೇರಿ ಮಠದೊಂದಿಗೆ ನಿಕಟ ಸಂಪರ್ಕ ವನ್ನು ಇರಿಸಿಕೊಂಡಿದ್ದಾರೆ. ಈ ಮಠಗಳ ಇಂದಿನ ಸ್ವಾಮಿ ಗಳವರ ಪೀಠಾರೋಹಣ ಸಮಾರಂಭದಲ್ಲಿ ಸಮಾಜ ಬಾಂಧವರ ವಿನಂತಿ ಯಂತೆ ಪೂಜ್ಯ ಜಗದ್ಗುರು ಗಳವರು ಉಪಸ್ಥಿತರಿದ್ದು ಅನುಗ್ರಹಿಸಿದ್ದಾರೆ. ಅವಿಭಕ್ತ ದಕ್ಷಿಣಕನ್ನಡದ ಅನೇಕ ಪ್ರದೇಶ ಗಳಲ್ಲಿ ನೆಲೆಸಿರುವ ಕುಡಾಲದೇಶಸ್ಥ, ರಾಜಪುರಿ ಸಾರಸ್ವತ, ಬಾಹುಸಾರ ಕ್ಷತ್ರಿಯ, ಬಂಟ, ಮೊಗೇರ, ವಾಲೆಕರ, ಪದ್ಮಶಾಲಿ, ಹರಿಕಾಂತ, ಮೇಸ್ತ, ಮರಾಟಿ, ಹೆಗಡೆ, ಗೌಡ, ಬೆಳಾರಿ, ನಾಯರಿ, ಕುಲಾವಿ-ಮೊದಲಾದ ಅನೇಕ ಮತಸ್ಥರು ಶ್ರೀಮಠದ ಶಿಷ್ಯರೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತಾರೆ. ಶ್ರೀಮದಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ಮತ್ತು ಅವರ ಕರಕಮಲ ಸಂಜಾತರಾದ ಶ್ರೀಭಾರತೀತೀರ್ಥ ಮಹಾಸ್ವಾಮಿ ಗಳವರು ಆಗಾಗ ಈ ಜಿಲ್ಲೆಯಲ್ಲಿ ವ್ಯಾಪಕ ಸಂಚಾರ ಕೈಗೊಂಡು ಶ್ರೀಮಠದ ಶಿಷ್ಯಸ್ತೋಮಕ್ಕೆ ಧಾರ್ಮಿಕ ಮಾರ್ಗದರ್ಶನ ನೀಡಿ, ಅವರನ್ನು ಸಂಘಟಿಸಿದ್ದಾರೆ. ಕೊಲ್ಲೂರು ಮತ್ತು ಕೋಟೆಕಾರು ಶೃಂಗೇರಿ ಶಂಕರ ಮಠಗಳು ಈ ಜಿಲ್ಲೆಗೆ ಅವರು ನೀಡಿದ ಅಪೂರ್ವ ಕೊಡುಗೆಗಳಾಗಿವೆ.

**ಶೃಂಗೇರಿ ಮತ್ತು ಕೊಲ್ಲೂರು**

ಕುಂದಾಪುರ ತಾಲೂಕಿನ ಶ್ರೀಕ್ಷೇತ್ರ ಕೊಲ್ಲೂರಿಗೂ, ಶೃಂಗೇರಿ ಶ್ರೀಶಾರದಾಪೀಠಕ್ಕೂ ಇರುವ ಸಂಬಂಧ ಬಹಳ ಪ್ರಾಚೀನವಾದುದು. ಈ ಸಂಬಂಧ ಆಚಾರ್ಯಶಂಕರರ ಕಾಲದಷ್ಟೇ ಪ್ರಾಚೀನ. ಅದು ಈ ತನಕ ಮುಂದುವರಿದು ಕೊಂಡು ಬಂದಿದೆ. ಕೆಳದಿಯ ಅರಸರು ಶ್ರೀ ಮೂಕಾಂಬಿಕಾದರ್ಶನಕ್ಕೆ ಹೋಗುವಾಗ ಶೃಂಗೇರಿಗೆ ಬಂದು ಶ್ರೀ ಜಗದ್ಗುರುಮಹಾಸ್ವಾಮಿ ಗಳವರಲ್ಲಿ ವಿಜ್ಞಾಪಿಸಿ, ಅವರನ್ನು ಮುಂದಿರಿಸಿ ಕೊಂಡು ಹೋಗುತ್ತಿದ್ದರೆಂದು ಉಲ್ಲೇಖಗಳಿವೆ. ಶರನ್ನವರಾತ್ರಿಯ ಸುವಾಸಿನೀಪೂಜೆಗೆ ಬೇಕಾಗುವ ಮಂಗಳದ್ರವ್ಯಗಳನ್ನು ಇಂದಿಗೂ ಶ್ರೀಮಠದಿಂದ ಕೊಲ್ಲೂರಿಗೆ ಕಳುಹಲಾಗುತ್ತಿದೆ. ಕೊಲ್ಲೂರಿನ ಕ್ಷೇತ್ರ ಪುರೋಹಿತರು ತಮ್ಮ ಉತ್ತರಾಧಿಕಾರಿಯನ್ನು ಮೂಕಾಂಬಿಕೆಯ ಪೂಜೆಗೆ ತೊಡಗಿಸುವ ಮುನ್ನ ಶೃಂಗೇರಿಗೆ ಬಂದು ಗುರುಗಳವರ ದರ್ಶನ ಮಾಡಿ, ಅವರ ಆಶೀರ್ವಾದ ಪಡೆದು ಹೋಗುವುದು ಸಂಪ್ರದಾಯ. ಕೊಲ್ಲೂರು ಕ್ಷೇತ್ರದಲ್ಲಿ ನಡೆಯುವ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಿಗೆ ಅಲ್ಲಿನ ಆಡಳಿತ ಮಂಡಳಿಯವರು ಶ್ರೀ ಶ್ರೀಗಳವರ ಮಾರ್ಗದರ್ಶನ ಪಡೆಯುತ್ತಿದ್ದಾರೆ. ಮುಕಾಂಬಿಕೆಯ ದೇವಾಲಯದ ಬಳಿ ಶ್ರೀಮಠಕ್ಕೆ ಸೇರಿದ ಚಂದ್ರಮೌಳೀಶ್ವರ ದೇವಾಲಯವಿದೆ. ಈ ದೇವಾಲಯಕ್ಕೆ ಶ್ರೀಮಠದಿಂದಲೇ ಅರ್ಚಕರನ್ನು ನೇಮಿಸಲಾಗಿದ್ದು, ಪೂಜಾದಿಗಳು ಶಾಸ್ತ್ರೋಕ್ತವಾಗಿ ನೆರವೇರುತ್ತಿವೆ. ಕೆಲವು ವರ್ಷಗಳ ಹಿಂದೆ ಅಲ್ಲಿರುವ ಶ್ರೀಮಠದ ಖಾಲಿ ನಿವೇಶನದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದ 'ಶಂಕರಕೃಪಾ' ಹೆಸರಿನ ಅತಿಥಿಗೃಹವನ್ನು ನಿರ್ಮಿಸಲಾಗಿದೆ.

(ಮುಂದುವರಿಯುವುದು)

## SCIENCE

When man discovered fire,
It made him admire,
That what a precious gold,
He has given to this world.
It was just a beginning of his adventure,
After this he began to fly high in sky as vulture.

When Graham Bell invented telephone,
Communication got some shape and backbone.
Do you know the invention of James Watt?
Steam Engine, which said the train to start.
The invention of aero plane by Wright Brothers,
Made everyone science thinkers.

From computers to mobile phone,
Science has given us lots of boon.
Think about this world without science,
Imagining itself is not nice.
Science has given us lots of gain,
Why should we think that it is a boon or bane.

**-Pragathi Bhandi, Perdoor**
10th Std., MJC, Manipal

## ಅಭಿನಂದನೆ

### ಅನುಜ್ಞ - ರಾಜ್ಯಕ್ಕೆ ದ್ವಿತೀಯ



ಮೂಡುಬಿದಿರೆಯ ರೋಟರಿ ಆಂಗ್ಲ ಮಾಧ್ಯಮ ಶಾಲೆಯ ಅನುಜ್ಞ ಈ ಬಾರಿಯ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 619 (99.04%) ಅಂಕಗಳನ್ನು ಪಡೆದು ರಾಜ್ಯದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ. ಈಕೆ ದೆಹಲಿಯಲ್ಲಿ ಕಾರ್ಪೊರೇಶನ್ ಬ್ಯಾಂಕ್ ಸೀನಿಯರ್ ಮೆನೇಜರ್ ಆಗಿರುವ ಶ್ಯಾಮಪ್ರಸಾದ ಶ್ಯಾನುಭಾಗ್-ಜ್ಯೋತಿ ದಂಪತಿಗಳ ಪುತ್ರಿ ಹಾಗೂ ಮಂಗಳೂರಿನಲ್ಲಿರುವ ಕೂಡ್ಲು ವಿಷ್ಣು ಶ್ಯಾನುಭಾಗ್ -ದಿ| ಪ್ರೇಮಾವತಿ ಅಮ್ಮ ಮತ್ತು ಕೋಟೇಶ್ವರ ದಲ್ಲಿರುವ ಪಿ. ಕೃಷ್ಣಮೂರ್ತಿ-ವರದಾ ದಂಪತಿಗಳ ಪೌತ್ರಿ. ಈಕೆ ಭರತನಾಟ್ಯದಲ್ಲಿ ಸೀನಿಯರ್ ಮತ್ತು ಸಂಗೀತದಲ್ಲಿ ಜ್ಯೂನಿಯರ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ.

### ಕು| ಸ್ನೇಹಾ ರಾವ್



ಕಳೆದ 2010-2011ನೇ ಸಾಲಿನ ದ್ವಿತೀಯ ಪಿ.ಯು.ಸಿ. ವಾಣಿಜ್ಯ ವಿಭಾಗದಲ್ಲಿ 97% (582/600) ಅಂಕ ಪಡೆದ ಸ್ನೇಹ ರಾವ್ ಮಂಗಳೂರಿನ ಶಾರದಾ ಪಿ.ಯು. ಕಾಲೇಜಿನ ವಿದ್ಯಾರ್ಥಿನಿ. ಈಕೆ ಬಿಜೈನ ಶ್ರೀ ಕೆ.ರಾಜಶೇಖರ ರಾವ್ ಮತ್ತು ಶ್ರೀಮತಿ ಪ್ರಸನ್ನ ಆರ್.ರಾವ್ ದಂಪತಿಗಳ ಪುತ್ರಿ. ಈಕೆ Statistics Accountancy, Basic Mathsನಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದಿರುತ್ತಾಳೆ.


### ಪ್ರೀತಿಕಾ ಪಿಲಿಂಜ



**CLAT ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ**

2011 ಮೇ 15ರಂದು ನಡೆದ ಸ್ನಾತಕೋತ್ತರ ಕಾನೂನು ಸಾಮಾನ್ಯ ಪ್ರವೇಶ ಪರೀಕ್ಷೆ (Common Law Admission Test-2011) ಯಲ್ಲಿ ಪ್ರೀತಿಕಾ ಪಿಲಿಂಜರವರು, ಅಖಿಲ ಭಾರತ ಮಟ್ಟದಲ್ಲಿ 7ನೇ ಹಾಗೂ ರಾಜ್ಯಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಪಡೆದಿರುತ್ತಾರೆ. ಇವರು ಪ್ರಸಕ್ತ ಮಂಗಳೂರಿನ ಎಸ್.ಡಿ.ಎಂ. ಕಾನೂನು ವಿದ್ಯಾಲಯದ ವಿದ್ಯಾರ್ಥಿನಿ. ಪುತ್ತೂರಿನ ಕೆನರಾ ಬ್ಯಾಂಕ್ ಉದ್ಯೋಗಿಯಾಗಿರುವ ಶ್ರೀ ತುಲಸಿ ದಾಸ್ ಪಿಲಿಂಜ ಹಾಗೂ ಸಾವಿತ್ರಿ ಪಿಲಿಂಜರವರ ಪುತ್ರಿಯಾದ ಇವರು LLB ಮೂರನೇ ವರ್ಷದ B.A. at Law ಪರೀಕ್ಷೆಯಲ್ಲೂ ಕೂಡ ಪ್ರಥಮ ರ್‍ಯಾಂಕ್ ಪಡೆದಿರುವರು.

### ಹರ್ಷಿತ್ ಜೆ.ರಾವ್



2011ನೇ ಸಾಲಿನ ಏಪ್ರಿಲ್ ತಿಂಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಯಲ್ಲಿ ಬಾರಕೂರಿನ ನ್ಯಾಶನಲ್ ಜ್ಯೂನಿಯರ್ ಕಾಲೇಜಿನ ವಿದ್ಯಾರ್ಥಿ ಹರ್ಷಿತ್ ಜೆ. ರಾವ್ ಇವನು 597 (95.5%) ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದಿರುತ್ತಾನೆ. 'ಹರಿಕೃಪಾ' ಮಸ್ಕೆಬೈಲ್ ಇಲ್ಲಿ ವಾಸ್ತವ್ಯದಲ್ಲಿರುವ ಇವರು ಬ್ರಹ್ಮಾವರದ ಇಂದಿರಾ ವಾಚ್ ವರ್ಕ್ಸ್‌ನ ಮಾಲಕರಾದ ಶ್ರೀ ಜಯರಾಮ ರಾವ್ ಮತ್ತು ಶ್ರೀಮತಿ ಶೋಭಾ ಜೆ. ರಾವ್ ಇವರ ಪುತ್ರ.

## ನೀಲಾವರ ಲಕ್ಷ್ಮೀನಾರಾಯಣ ರಾವ್ ಮತ್ತು ಹಿರಿಯಡ್ಕ ಗೋಪಾಲರಾವ್ ಇವರಿಗೆ ಸನ್ಮಾನ



ಶ್ರೀಮತಿ ಶೋಭಾ ಮತ್ತು ಶ್ರೀ ರಾಧಾಕೃಷ್ಣ ರಾವ್ ಮತ್ತು ಮಕ್ಕಳು, ಹೊಟೇಲ್ ಭ್ರಮರ, ಶ್ರೀಕಲಾ ಕಾಂಪ್ಲೆಕ್ಸ್, ಕುಕ್ಕಿಕಟ್ಟೆ, ಉಡುಪಿ ಇವರು ಯಕ್ಷಗಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ಸಲುವಾಗಿ ದಿ| ಅನಂತಯ್ಯ ಹಾಗೂ ದಿ| ಸುಬ್ಬರಾವ್ ಇವರ ಸ್ಮರಣಾರ್ಥ ದಿನಾಂಕ 1, ಮೇ 2011ನೇ ಆದಿತ್ಯವಾರ ರಾತ್ರಿ ಗಂಟೆ 7-30ಕ್ಕೆ ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವಠಾರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ (ಭಾಗವತರು ಹಾಗೂ ಗಮಕ ಕಲಾವಿದರು ಮತ್ತು ಶ್ರೀ ಹಿರಿಯಡ್ಕ ಗೋಪಾಲರಾವ್ (ಮದ್ದಳೆ ಕಲಾವಿದರು) ಇವರನ್ನು ಹೃದಯಸ್ಪರ್ಶಿ ಸಮಾರಂಭದಲ್ಲಿ ಡಾ| ನಿ.ವಿಜಯಬಲ್ಲಾಳ್, ಧರ್ಮದರ್ಶಿಗಳು, ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನ, ಅಂಬಲಪಾಡಿ, ಉಡುಪಿ ಇವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಿದರು. ಆ ದಿನ ರಾತ್ರಿ ಶ್ರೀ ವೀರಭದ್ರ ಯಕ್ಷಗಾನ ಮಂಡಳಿ, ಹಿರಿಯಡ್ಕ ಇವರಿಂದ ಹಿರಿಯಡ್ಕ ಕ್ಷೇತ್ರ ಮಹಾತ್ಮೆ ಎಂಬ ಪುಣ್ಯ ಕಥಾ ಭಾಗದ ಯಕ್ಷಗಾನ ಬಯಲಾಟವನ್ನೂ ಏರ್ಪಡಿಸಿದ್ದರು.

### ನಿಹಾಲ್ ಆರ್.ರಾವ್



2010-11ನೇ ಸಾಲಿನ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಚಿಟ್ಪಾಡಿ ನಿಹಾಲ್ ಆರ್.ರಾವ್ 90.72% (567) ಅಂಕಗಳಿಸಿ ತೇರ್ಗಡೆಯಾಗಿದ್ದಾನೆ. ಉಡುಪಿಯ ಸೈಂಟ್ ಮೇರಿಸ್ ಇಂಗ್ಲಿಷ್ ಮೀಡಿಯಂ ಶಾಲೆಯ ವಿದ್ಯಾರ್ಥಿಯಾದ ಈತ ಕರಾಟೆಯಲ್ಲಿಯೂ ತನ್ನ ಪ್ರತಿಭೆಯನ್ನು ಮೆರೆದು ತಾಲೂಕು ಹಾಗೂ ಜಿಲ್ಲಾ ಮಟ್ಟದ ಹಲವಾರು ಸ್ಪರ್ಧೆಗಳಲ್ಲಿ ಬಹುಮಾನ ಗಳನ್ನು ಗೆದ್ದಿರುತ್ತಾನೆ. ಈ ಬಗ್ಗೆ ಹಿಂದೆ ಶ್ರೀಶಾರದಾ ಪತ್ರಿಕೆಯಲ್ಲಿ ವರದಿ ಬಂದಿರುತ್ತದೆ. ಯಕ್ಷಗಾನದಲ್ಲಿ ಹೆಜ್ಜೆಗಾರಿಕೆಯೊಂದಿಗೆ ವೇಷಧಾರಿಯಾಗಿ ಕಾಣಿಸಿ ಕೊಂಡಿದ್ದಾನೆ. ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಕುಂಜಿಬೆಟ್ಟು ಉಡುಪಿ ಇದರ ಕಲಾವಿದನಾದ ನಿಹಾಲ್ ಬಹುಮುಖ ಪ್ರತಿಭೆಯ ವಿದ್ಯಾರ್ಥಿಯಾಗಿದ್ದಾನೆ.

ಚಿ| ನಿಹಾಲ್ ಆರ್.ರಾವ್ ಇವನು ಕರ್ನಾಟಕ ಬ್ಯಾಂಕ್‌ನ ಮೆನೇಜರ್ ಚಿಟ್ಪಾಡಿಯ ರಾಜೇಶ್ ರಾವ್ ಹಾಗೂ ಶ್ರೀಮತಿ ಮೀರಾ ಆರ್.ರಾವ್ ದಂಪತಿಗಳ ಪುತ್ರ.

### ಸ್ನೇಹಾರಾವ್



2010-11ನೇ ಸಾಲಿನ 10ನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಮಂಗಳೂರಿನ ಸ್ನೇಹಾ ರಾವ್ 615 (98.4) ಅಂಕಗಳಿಸಿ ತೇರ್ಗಡೆಯಾಗಿದ್ದಾಳೆ. ಈಕೆ ಮಂಗಳೂರಿನ ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿಯಲ್ಲಿ ವಾಸ್ತವ್ಯವಿರುವ ಶ್ರೀ ಯು. ಸಂತೋಷ್‌ಕುಮಾರ್ ಹಾಗೂ ಶ್ರೀಮತಿ ರಜನಿ ಸಂತೋಷ್ ಇವರ ಪುತ್ರಿ.

### ಕು| ಮೇಧಾ ಬಿ.



ಲಿಟ್ಲ್ ರೋಕ್ ಇಂಡಿಯನ್ ಸ್ಕೂಲಿನ ಎಸ್.ಎಸ್.ಎಲ್.ಸಿ. (ಸಿಬಿಎಸ್‌ಇ) ಹತ್ತನೇ ತರಗತಿಯಲ್ಲಿ ಓದುತ್ತಿದ್ದ ಕು| ಮೇಧಾ ಬಿ. ಕ್ಯುಮುಲೇಟಿವ್ ಗ್ರೇಡ್ ಪಾಯಿಂಟ್ ಆದ ಹತ್ತು ಅಂಕಗಳನ್ನು ಎಲ್ಲಾ ವಿಷಯಗಳಲ್ಲಿ ಗಳಿಸಿ ಶ್ರೇಷ್ಠ ಸಾಧನೆ ಮಾಡಿದ್ದಾಳೆ. ಇವಳು ಶ್ರೀಮತಿ ಬಿ.ಅನುರಾಧ ರಾವ್ ಮತ್ತು ಬಿ. ಉದಯ (LIC D.O.) ಇವರ ಪುತ್ರಿ.

### ಶಿವಪ್ರಸಾದ್



ಮಂಗಳೂರು ಹೊಸಬೆಟ್ಟಿನಲ್ಲಿರುವ ಪೂವಂದೂರು ರಾಮಕೃಷ್ಣಯ್ಯ ಮತ್ತು ಯಶೋದಾ ದಂಪತಿಗಳ ಸುಪುತ್ರ ಚಿ| ಶಿವಪ್ರಸಾದನು ಈ ವರ್ಷದ ದ್ವಿತೀಯ ಪಿ.ಯು.ಸಿ. (ವಿಜ್ಞಾನ ವಿಭಾಗ) ಅಂತಿಮ ಪರೀಕ್ಷೆಯಲ್ಲಿ ಶೇಕಡಾ 94 ಅಂಕಗಳನ್ನು ಪಡೆದು ತೇರ್ಗಡೆಯಾಗಿರುತ್ತಾನೆ. ಇವನು ಕೆನರಾ ಪಿ.ಯು.ಕಾಲೇಜು, ಮಂಗಳೂರು ಇದರ ಪ್ರತಿಭಾವಂತ ವಿದ್ಯಾರ್ಥಿ.

### ಕು| ದೀಕ್ಷಾ



ಸರಕಾರಿ ಸಂಯುಕ್ತ ಪ್ರೌಢಶಾಲೆ ಒಳಕಾಡು (ಸೌತ್‌ಶಾಲೆ) ಉಡುಪಿಯ ವಿದ್ಯಾರ್ಥಿನಿ ಕು| ದೀಕ್ಷಾ ರಾವ್‌ರವರ ಎಸ್.ಎಸ್.ಎಲ್.ಸಿ. (10ನೇ ತರಗತಿಯಲ್ಲಿ) 589 (94%) ಗಳಿಸಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾಳೆ. ಇವಳು ಉಡುಪಿ ನಿವಾಸಿ ಎಲ್ಲೂರು ಪ್ರಸಾದ್ ಕುಮಾರ್ ಮತ್ತು ಸುನೀತಾ ದಂಪತಿಗಳ ಪುತ್ರಿ.

### ಸ್ವರೂಪ್ ರಾವ್



ನಿಟ್ಟೆಯ ಡಾ| NSAM PU ಕಾಲೇಜಿನ ವಿದ್ಯಾರ್ಥಿಯಾದ ಚಿ| ಸ್ವರೂಪ್ ರಾವ್ ಈ ಬಾರಿಯ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 94% (565) ಅಂಕಗಳಿಸುವ ಮೂಲಕ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಗೊಂಡಿರುತ್ತಾನೆ.

PCMBಯಲ್ಲಿ ಅನುಕ್ರಮವಾಗಿ 99, 99, 100 ಹಾಗೂ 95 ಅಂಕಗಳಿಸುವ ಮೂಲಕ ಉತ್ತಮ ಸಾಧನೆಯನ್ನು ತೋರಿ ಮುಂದೆ ಇಂಜಿನಿಯರಿಂಗ್ ಪ್ರವೇಶ ಇಚ್ಛಿಸಿರುತ್ತಾನೆ. ಈ ಹಿಂದೆ ಎಸ್.ಎಸ್.ಎಲ್.ಸಿ.ಯಲ್ಲಿ 94.6% ಅಂಕ ಪಡೆದಿದ್ದ ಈತ ನಿಟ್ಟೆಯಲ್ಲಿ ವಾಸ್ತವ್ಯವಿರುವ ಶ್ರೀ ನಿತ್ಯಾನಂದ ರಾವ್ ಹಾಗೂ ಶ್ರೀಮತಿ ಚೇತನಾ ರಾವ್ ಇವರ ಸುಪುತ್ರ.

### ವಿಳಾಸ ಬದಲಾವಣೆ

**ರಾಜಶೇಖರ್**

'ಮಾರುತಿ ನಿಲಯ', ಎಮ್.ಐ.ಜಿ. 330,
ಗ್ರೌಂಡ್ ಫ್ಲೋರ್, 6ನೇ ಮುಖ್ಯರಸ್ತೆ,
3ನೇ ಅಡ್ಡರಸ್ತೆ, ಎಚ್. ಬ್ಲಾಕ್,
ರಾಮಕೃಷ್ಣ ನಗರ, ಮೈಸೂರು.

## ಮಾಂಗಲ್ಯಂ ತಂತುನಾನೇನ ....

ತೋಟಾಲು ಉಮೇಶ್ ರಾವ್ ಮತ್ತು ಶ್ರೀಮತಿ ಅನುಪಮಾ ಇವರ ಪುತ್ರ **ಅಮೃತ್** ಹಾಗೂ ಪಡುಬಿದ್ರಿ ಸಚ್ಚಿದಾನಂದ ಶರ್ಮ ಮತ್ತು ಮಣಿಪ್ರಭಾ ಶರ್ಮ ಇವರ ಪುತ್ರಿ **ಗಾಯತ್ರಿ** ಇವರ ವಿವಾಹವು ತಾ.25-04-2011 ರಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ಸಭಾಭವನದಲ್ಲಿ ನೆರವೇರಿತು.

★★★ ★★★

ಶಿಮಂತೂರು ಶ್ರೀಮತಿ ಸರಸ್ವತಿ ಮತ್ತು ಶ್ರೀ ಎಸ್.ಡಿ.ಅನಂತರಾಜ ರಾವ್ ಇವರ ಪುತ್ರ **ರಾಜೇಶ್** ಹಾಗೂ ಬ್ರಹ್ಮಾವರ ಶ್ರೀಮತಿ ಗೌರಿ ಮತ್ತು ಶ್ರೀ ಬಿ. ಸೋಮೇಶ್ವರ ರಾವ್ ಇವರ ಪುತ್ರಿ **ಅಂಜಲಿ** ಇವರ ವಿವಾಹವು ತಾ.06-05-2011 ರಂದು ಉಡುಪಿ ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಬೆಳ್ಮಣ್ಣು ಕೀರ್ತಿಶೇಷ ಬಾಲಕೃಷ್ಣ ರಾಯರ ಪುತ್ರಿ **ಪವಿತ್ರ** ಹಾಗೂ ಶ್ರೀಮತಿ ಮತ್ತು ಶ್ರೀ ಎಮ್.ಕೆ. ಮೋಹನ ರಾಯರ ಪುತ್ರ **ಕೃಷ್ಣ** ಇವರ ವಿವಾಹವು ತಾ.11-05-2011ರಂದು ಬೆಳ್ಮಣ್ಣು ಶ್ರೀ ದುರ್ಗಾ ಪರಮೇಶ್ವರಿ ಸನ್ನಿಧಿಯ ಸಭಾಗೃಹದಲ್ಲಿ ನೆರವೇರಿತು.

★★★ ★★★

ಇನ್ನಾ ಶ್ರೀನಿವಾಸ ರಾವ್ ಮತ್ತು ಶ್ರೀಮತಿ ಪುಷ್ಪಾವತಿ ಇವರ ಪುತ್ರ **ಸಂದೀಪ ಕುಮಾರ್** ಹಾಗೂ ಶ್ರೀ ಪ್ರಭಾಕರ ಶ್ಯಾನುಭೋಗ್ ಮತ್ತು ಶ್ರೀಮತಿ ವೀಣಾರವರ ಪುತ್ರಿ **ಮಧುರಾ** ಇವರ ವಿವಾಹವು ತಾ.13-05-2011ರಂದು ಉಡುಪಿ ಸಗ್ರಿ ವಾಸುಕೀ ಸುಬ್ರಹ್ಮಣ್ಯ ದೇವಸ್ಥಾನದ ಅನಂತ ಸಭಾಭವನದಲ್ಲಿ ನೆರವೇರಿತು.

★★★ ★★★

ಕಿನ್ನಿಮೂಲ್ಕಿ ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಕೆ. ಸದಾನಂದ ರಾವ್ ಇವರ ಪುತ್ರ **ಶರತ್** ಹಾಗೂ ಅಡೂರು ಶ್ರೀಮತಿ ಕವಿತಾ ಮತ್ತು ಡಾ। ಎ.ಎಸ್.ಜಯಪ್ರಕಾಶ್ ಇವರ ಪುತ್ರಿ **ಶ್ರುತಿ** ಇವರ ವಿವಾಹವು ತಾ.18-05-2011ರಂದು ಮಂಗಳೂರು ಬಿಜೈ ರಸ್ತೆಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸಭಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಪ್ರಭಾ ಮತ್ತು ಶ್ರೀ ಕೆ. ಪ್ರಭಾಕರ ರಾವ್ ಇವರ ಪುತ್ರಿ **ಶ್ರುತಿ** ಹಾಗೂ ಶ್ರೀಮತಿ ಸಂಗೀತಾ ಮತ್ತು ಶ್ರೀ ಟಿ. ಶಂಕರರಾವ್ ಇವರ ಪುತ್ರ **ಸಂದೀಪ** ಇವರ ವಿವಾಹವು ತಾ.22-05-2011ರಂದು ಬೆಂಗಳೂರಿನ ವುಡ್‌ಲ್ಯಾಂಡ್ಸ್ ಹೋಟೇಲಿನ ಗ್ರೀನ್ ಆರ್ಚ್‌ನಲ್ಲಿ ನೆರವೇರಿತು.

★★★ ★★★

ಶ್ರೀ ಕೆ. ಬಾಲಚಂದ್ರರಾಯರ ಸುಪುತ್ರ **ಕಿರಣ** ಹಾಗೂ ಶ್ರೀ ಎನ್.ಲಕ್ಷ್ಮೀನಾರಾಯಣ ರಾಯರ ಪುತ್ರಿ **ಸಹನಾ** ಇವರ ವಿವಾಹವು ತಾ.22-05-2011 ರಂದು ನಾರಾವಿ ಶ್ರೀಸೂರ್ಯ ನಾರಾಯಣ ದೇವಸ್ಥಾನದ ಬಳಿ ಇರುವ ನೂತನ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ವತ್ಸಲಾ ಮತ್ತು ಶ್ರೀ ಬೋಳ ಅಚ್ಚುತ ರಾಯರ ಪುತ್ರಿ **ರಮ್ಯ** ಹಾಗೂ ಶ್ರೀಮತಿ ಮೈಥಿಲಿ ಮತ್ತು ಶ್ರೀ ಆರ್.ಕೆ. ಸುಂದರ್ ತಂಜಾವೂರು ಇವರ ಪುತ್ರ **ಹರಿಸೂದನ್** ಇವರ ವಿವಾಹವು ತಾ.06-06-2011 ರಂದು ಬೆಂಗಳೂರು ವಿದ್ಯಾರಣ್ಯಪುರದಲ್ಲಿರುವ ಚಂದನ ಪ್ಯಾಲೇಸ್ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಇಂದಿರಾದೇವಿ ಮತ್ತು ಶ್ರೀ ಎಸ್. ದಿವಾಕರ ರಾಯರ ಪುತ್ರ **ಸಂತೋಷ್** ಹಾಗೂ ಶ್ರೀಮತಿ ಜಯಶ್ರೀ ಮತ್ತು ಲೋಣಂದ ವಿಶ್ವನಾಥ ಶ್ಯಾನುಭಾಗರ ಪುತ್ರಿ **ಮಾಧವಿ** ಇವರ ವಿವಾಹವು ತಾ.08-06-2011 ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮಹಾಲಕ್ಷ್ಮೀ ಮತ್ತು ತಂತ್ರಾಡಿ ಶ್ರೀ ಬಾಬುರಾಯ ಶ್ಯಾನುಭಾಗರ ಪುತ್ರ **ಮಾಧವ** ಹಾಗೂ ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಮಲ್ಲೇಶ್ವರ ರಾವ್ ಇವರ ಪುತ್ರಿ **ಜ್ಯೋತಿ** ಇವರ ವಿವಾಹವು ತಾ.10-06-2011ರಂದು ಮಂದಾರ್ತಿ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯ ಶ್ರೀಪತಿ ಅಡಿಗರ ಮನೆಯಲ್ಲಿ ನೆರವೇರಿತು.

## ಉಪನಯನ

**ಚಿ। ಸನತ್**

ಶ್ರೀಮತಿ ಗಾಯತ್ರಿ ಮತ್ತು ಶ್ರೀ ಉಪ್ಪೂರು ಯೋಗೀಶ ರಾವ್ ಬೆಂಗಳೂರು ಇವರ ಪುತ್ರ ಸನತ್ ಇವನ ಬ್ರಹ್ಮೋಪದೇಶವು ತಾ.8-5-2011 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★

**ಚಿ। ಸಾಕ್ಷಾತ್**

ಶ್ರೀಮತಿ ಸ್ಮಿತಾ ಮತ್ತು ಮತ್ತು ಶ್ರೀ ಪರೀಕ ಡಾ। ಅವಿನಾಶ್ ರಾವ್ ಇವರ ಪುತ್ರ ಸಾಕ್ಷಾತ್ ಇವನ ಬ್ರಹ್ಮೋಪದೇಶವು ತಾ.9-5-2011 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★

**ಚಿ। ನಿಶಾಂತ್**

ಕಾಂತಾವರ ಶ್ರೀ ಅರುಣ್ ಕೆ. ರಾವ್ ಮತ್ತು ಶ್ರೀಮತಿ ಶರಯೂ ಇವರ ಪುತ್ರ ನಿಶಾಂತ್ ಇವನ ಬ್ರಹ್ಮೋಪದೇಶವು ತಾ.12-5-2011 ರಂದು ಬೆಂಗಳೂರು ಮಾಗಡಿ ರಸ್ತೆ, ಕೊಡಿಗೆಹಳ್ಳಿ ಜ್ಞಾನಶಕ್ತಿ ಕಲ್ಯಾಣ ಮಂಟಪದಲ್ಲಿ ಜರಗಿತು.

★★★★

**ಚಿ। ಮಂದಾರ**

ಬಾರಕೂರು ಕೋಟೆಕೇರಿ ಶ್ರೀಮತಿ ಅನುರಾಧ ಮತ್ತು ಶ್ರೀ ಉದಯ ರಾವ್ ಇವರ ಪುತ್ರ ಮಂದಾರ ಇವನ ಬ್ರಹ್ಮೋಪದೇಶವು ತಾ.13-5-2011 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ಜರಗಿತು.

★★★★

**ಚಿ। ನಿಖಿಲ್**

ಶ್ರೀಮತಿ ಚೇತನಾ ಮತ್ತು ಶ್ರೀ ಸದಾಶಿವ ರಾವ್ ಹೊಸ್ಕೋಟೆ ಇವರ ಪುತ್ರ ನಿಖಿಲ್ ಇವನ ಬ್ರಹ್ಮೋಪದೇಶವು ತಾ.13-5-2011ರಂದು ಹೊಸ್ಕೋಟೆಯ ಸ್ವಗೃಹದಲ್ಲಿ ಜರಗಿತು.

## ಗೃಹಪ್ರವೇಶ

ಶ್ರೀಮತಿ ಜಯಲಕ್ಷ್ಮಿ ಮತ್ತು ಶ್ರೀ ರಾಜಗೋಪಾಲ ರಾವ್ ಇನ್ನಾ ಇವರು ಉಡುಪಿಯ ಚಿಟ್ಪಾಡಿ ಬೈಲುರಸ್ತೆ ಕಸ್ತೂರ್ಬಾ ನಗರದಲ್ಲಿ ನೂತನವಾಗಿ ನಿರ್ಮಿಸಿದ ಗೃಹ ‘ಸ್ವಸ್ತಿ’ ಇದರ ಪ್ರವೇಶೋತ್ಸವವನ್ನು ತಾ.9-5-2011 ರಂದು ನೆರವೇರಿಸಿದರು.

★★★★

ಶ್ರೀಮತಿ ಅನುಸೂಯ ಮತ್ತು ಶ್ರೀ ಎಮ್.ಸುಬ್ರಹ್ಮಣ್ಯ ರಾವ್ ಇವರು ಆದಿಉಡುಪಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ ‘ಶಿವಕೃಪಾ’ ಇದರ ಪ್ರವೇಶೋತ್ಸವವನ್ನು ತಾ.19-05-2011ರಂದು ನೆರವೇರಿಸಿದರು.

★★★★

ಶ್ರೀಮತಿ ಗೀತಾ ಮತ್ತು ಶ್ರೀ ದಿನಕರ್ ರಾವ್ ಇವರು ಪಡುಬಿದ್ರಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ ‘ರಜತಾದ್ರಿ’ ಇದರ ಪ್ರವೇಶೋತ್ಸವವನ್ನು ತಾ.03-06-2011ರಂದು ನೆರವೇರಿಸಿದರು.

★★★★

ಶ್ರೀಮತಿ ಕೆ. ಕನಕವಲ್ಲಿ ಮತ್ತು ಲಯನ್ ಕೆ.ಹರ್ಷಕುಮಾರ್ ಇವರು ಕಾಮಾಜೆ ಕಲ್ಯಾ ಎಂಬಲ್ಲಿ ‘ಹರ್ಷ ಫಾರಂ ಹೌಸ್’ನಲ್ಲಿ ನೂತನವಾಗಿ ನಿರ್ಮಿಸಿದ ಗೃಹ ‘ಕನಕಶ್ರೀ’ ಇದರ ಪ್ರವೇಶೋತ್ಸವವನ್ನು ತಾ.10-06-2011ರಂದು ನೆರವೇರಿಸಿದರು.

★★★★

ಶ್ರೀಮತಿ ನಮಿತಾ ಮತ್ತು ಶ್ರೀ ವೈಶಾಖ ಶಾನುಭಾಗ್ ದಂಪತಿಗಳು ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಎಮ್.ಎಸ್. ಆರ್.ಎಸ್. ನಗರದಲ್ಲಿ ನಿರ್ಮಿಸಿದ ನೂತನ ಗೃಹದ ಪ್ರವೇಶೋತ್ಸವವನ್ನು ತಾ.19-5-2011ರಂದು ನೆರವೇರಿಸಿದರು.

★★★★

ಶ್ರೀಮತಿ ಮಮತ ಮತ್ತು ವಗ್ಗ ಶ್ರೀ ಹರೀಶ್ ರಾವ್ ದಂಪತಿಗಳು ಧರ್ಮಸ್ಥಳ ಜೋಡುಸ್ಥಾನದಲ್ಲಿ ನೂತನವಾಗಿ ನಿರ್ಮಿಸಿದ ಗೃಹ ‘ಕೇದಗೆ’ ಇದರ ಪ್ರವೇಶೋತ್ಸವವನ್ನು ತಾ.25-5-2011 ರಂದು ನೆರವೇರಿಸಿದರು.

★★★ ★★★

ಶ್ರೀಮತಿ ಸರೋಜಿನಿ ದೇವರಾವ್, ದೇವಿಕೃಪಾ ನಂದಿಕೂರು ಇವರ ಪುತ್ರ ಮಂಜುನಾಥ್ ಇವರು ಪಡುಬಿದ್ರಿ ಮುರುಡಿ ಬ್ರಹ್ಮಸ್ಥಾನದ ಬಳಿ ನೂತನವಾಗಿ ನಿರ್ಮಿಸಿದ ಗೃಹ ‘ಶ್ರೀಪ್ರಸಾದ’ ಇದರ ಪ್ರವೇಶೋತ್ಸವವನ್ನು ತಾ.6-5-2011ರಂದು ನೆರವೇರಿಸಿದರು.

## ಮಿಥುನ ಮಾಸ ವಿಶೇಷ ದಿನಗಳು

| | |
|---|---|
| 15-06-2011 | ಮಿಥುನ ಸಂಕ್ರಮಣ ಪೂರ್ಣಿಮಾ, ಖಗ್ರಾಸ ಚಂದ್ರಗ್ರಹಣ |
| 19-06-2011 | ಸಂಕಷ್ಟಹರ ಚತುರ್ಥಿ ಚಂದ್ರೋದಯ ಘಂಟೆ ರಾತ್ರಿ, 10-08 |
| 22-06-2011 | ಆರ್ದ್ರಾ ನಕ್ಷತ್ರಾರಂಭ |
| 27-06-2011 | ಸರ್ವೈಕಾದಶೀ |
| 28-06-2011 | ಪ್ರದೋಷಃ, |
| 01-07-2011 | ಅಮಾವಾಸ್ಯಾ |
| 06-07-2011 | ಪುನರ್ವಸು ನಕ್ಷತ್ರಾರಂಭ |
| 11-07-2011 | ಸರ್ವೈಕಾದಶೀ |
| 12-07-2011 | ಪ್ರದೋಷಃ |
| 15-07-2011 | ಪೂರ್ಣಿಮಾ |
| 16-07-2011 | ಕರ್ಕಾಟಕ ಸಂಕ್ರಮಣ |

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ಹರ್ನಿಯಾ (hernia) ಎಂದರೇನು? ಇದರ ಚಿಕಿತ್ಸೆ ಹೇಗೆ?** — **ಡಾ। ವೈ. ಸುದರ್ಶನ ರಾವ್**

**ಉತ್ತರ:** ನಮ್ಮ ದೇಹದಲ್ಲಿ ತಲೆಬುರುಡೆ, ಎದೆ ಹಾಗೂ ಹೊಟ್ಟೆಗಳೆಂಬ ಮೂರು ಟೊಳ್ಳು ಕುಹರ (cavity)ಗಳಿವೆ. ಈ ಟೊಳ್ಳು ಕುಹರಗಳ ಗೋಡೆಯು ಬಲವಾದ ಎಲುಬು ಸಾಗೂ ಮಾಂಸಖಂಡಗಳಿಂದ ಮಾಡಲ್ಪಟ್ಟಿವೆ. ಈ ಟೊಳ್ಳು ಕುಹರದೊಳಗೆ ನಮ್ಮ ದೇಹವು ವಿವಿಧ ಅಂಗಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬರುತ್ತಿದೆ. ಒಂದು ವೇಳೆ ಈ ಕುಹರದ ಗೋಡೆಯಲ್ಲಿ ಯಾವುದಾದರೊಂದು ಕಾರಣದಿಂದಾಗಿ ತೂತು ಆದರೆ ಆಗ ಆ ಕುಹರದೊಳಗಿರುವ ಅಂಗವು ಅಥವಾ ಅಂಗದ ಭಾಗವು ಈ ತೂತಿನಿಂದ ಹೊರಗೆ ಬರುವ ಸಾಧ್ಯತೆ ಇದೆ. ಹೀಗೆ ದೇಹದ ಟೊಳ್ಳುಕುಹರವೊಂದರ ಗೋಡೆಯಲ್ಲಾದ ತೂತಿನಿಂದ ಕುಹರದಲ್ಲಿರುವ ಅಂಗಗಳು ಹೊರಗೆ ಬಂದರೆ ಅದನ್ನು ಹರ್ನಿಯಾ ಎಂದು ಕರೆಯುತ್ತೇವೆ.

ತಲೆಬುರುಡೆಯಿಂದ ಮೆದುಳು ಈ ರೀತಿ ಹೊರಗೆ ಬರುವುದು ಅಥವಾ ಎದೆಗೂಡಿನಿಂದ ಅದರ ಅಂಗಗಳು ಈ ರೀತಿ ಹೊರಗೆ ಬರುವುದು ತುಂಬಾ ಅಪರೂಪ. ಅತೀ ಸಾಮಾನ್ಯವಾಗಿ ಹರ್ನಿಯಾ ಕಂಡುಬರುವುದು ಹೊಟ್ಟೆಯ ಕುಹರದಲ್ಲಿ. ಹೊಕ್ಕುಳು (umbilical hernia) ಮತ್ತು ತೊಡೆ ಸಂದಿಯ (inguinal and femoral hernia) ಬಳಿಯ ಜಾಗಗಳು ಹೊಟ್ಟೆಯಲ್ಲಿ ಹರ್ನಿಯಾ ಆಗುವ ಸಾಮಾನ್ಯ ಸ್ಥಳಗಳು. ಕೆಲವೊಮ್ಮೆ ಮುಂಚೆ ಹೊಟ್ಟೆಯೊಯ್ದು ಅಪರೇಶನ್ ಮಾಡಿದ ಗಾಯದಲ್ಲಿ ಮಾಂಸಖಂಡಗಳನ್ನು ಹೊಲಿದಿರುವ ಹೊಲಿಗೆ ಬಿಚ್ಚಿಕೊಂಡರೂ ಇದೇ ರೀತಿ ಹರ್ನಿಯಾ (incisional hernia) ಆಗುತ್ತದೆ. ಹಾಗೆಯೇ ಹೊಟ್ಟೆಯ ಮೇಲ್ಭಾಗದಲ್ಲೂ (epigastric hernia) ಹೊಟ್ಟೆಯ ಇಕ್ಕೆಲಗಳಲ್ಲೂ (lumbar hernia) ಹರ್ನಿಯಾ ಆಗಬಹುದು.

ಹರ್ನಿಯಾ ಇರುವ ಭಾಗದಲ್ಲಿ ಉರುಟಾದ, ನುಣುಪಾದ, ಮೆತ್ತನೆಯ ನೋವಿಲ್ಲದ ಗುಳ್ಳೆ ಮುಟ್ಟಲು ಸಿಗುವುದು ಈ ಕಾಯಿಲೆಯ ಚಿಹ್ನೆ. ಈ ಗುಳ್ಳೆಯನ್ನು ಒತ್ತಿದರೆ ಅದು ಹೊಟ್ಟೆಯೊಳಗೆ ಪುಳುಕ್ಕನೆ ಹಿಂತಿರುಗಿ ಮಾಯವಾಗುತ್ತದೆ. ಮತ್ತೆ ತುಂಬಾ ಹೊತ್ತು ನಿಂತುಕೊಂಡಾಗ, ಕೆಮ್ಮಿದಾಗ, ತಿಣುಕಿದಾಗ, ಪುನಃ ಕಾಣುತ್ತದೆ. ಕೆಲವೊಮ್ಮೆ ಅದನ್ನು ಒತ್ತಿದರೆ ಸ್ವಲ್ಪ ನೋವಾಗಬಹುದು. ದಿನಕಳೆದಂತೆ ಈ ಗುಳ್ಳೆಯ ಗಾತ್ರ (ಈ ಗುಳ್ಳೆ ನಿಜವಾಗಿ ಗುಳ್ಳೆಯಲ್ಲ, ಹೊಟ್ಟೆಯಿಂದ ಹೊರಗೆ ಬಂದು ಚರ್ಮದಡಿಯಲ್ಲಿ ಕೈಗೆ ಸಿಗುವ ಅಂಗ-ಹೆಚ್ಚಾಗಿ ಕರುಳಿನ ಭಾಗ) ನಿಧಾನವಾಗಿ ದೊಡ್ಡದಾಗುತ್ತದೆ. ಒಂದು ವೇಳೆ ಗುಳ್ಳೆಯ ಗಾತ್ರ ದೊಡ್ಡದಿದ್ದು ಹೊರಗೆ ಬಂದ ತೂತು ಸಣ್ಣದಿದ್ದರೆ ಅದನ್ನು ನೂಕಿದರೂ ಹೊಟ್ಟೆಯೊಳಗೆ ಹಿಂತಿರುಗದಿರಬಹುದು. ಇನ್ನು ಕೆಲವು ಕೇಸುಗಳಲ್ಲಿ ತೂತಿನ ಗಾತ್ರ ಹೊರಬಂದಿರುವ ಅಂಗದ ರಕ್ತನಾಳದ ಮೇಲೆ ಒತ್ತಡ ಬೀಳುವಷ್ಟು ಸಣ್ಣದಿದ್ದರೆ ಆ ಅಂಗದ ರಕ್ತ ಸಂಚಾರ ನಿಂತು ಹೋಗಿ ಅದು ಅಲ್ಲಿ ಕೊಳೆತು ಹೋಗಬಹುದು. ಈ ಎರಡು ಸಂದರ್ಭಗಳಲ್ಲಿ ಹರ್ನಿಯಾ ಇರುವ ಜಾಗದಲ್ಲೂ, ಹೊಟ್ಟೆಯೊಳಗೂ ಸಹಿಸಲಾಗದಷ್ಟು ನೋವಿದ್ದು, ವಾಂತಿ ಹಾಗೂ ಹೊಟ್ಟೆ ಉಬ್ಬರಿಸುವುದೇ ಇತ್ಯಾದಿ ಚಿಹ್ನೆಗಳಿರುತ್ತವೆ. ಈ ಪರಿಸ್ಥಿತಿಯಲ್ಲಿ ಸಮಯ ವ್ಯರ್ಥ ಮಾಡದೆ ತುರ್ತಾಗಿ ಶಸ್ತ್ರಚಿಕಿತ್ಸೆ ಮಾಡುವ ಅಗತ್ಯ ಇದೆ.

ಹರ್ನಿಯಾ ಕಾಯಿಲೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ಹೊಟ್ಟೆಯ ಚೀಲದಲ್ಲಿನ ತೂತನ್ನು ಹೊಲಿದು ಮುಚ್ಚುವುದರಿಂದ ಗುಣಪಡಿಸಬಹುದು. ಆದರೆ ಕೆಲವೊಮ್ಮೆ ಈ ಹೊಲಿಗೆಯೂ ಬಿಚ್ಚಿ ಹೋಗಿ ಹರ್ನಿಯಾ ಮರುಕಳಿಸುವುದಿದೆ. ಹಾಗಾಗಿ ಈಗ ಈ ತೂತನ್ನು ಕೇವಲ ಹೊಲಿಗೆ ಮಾತ್ರ ಹಾಕಿ ಮುಚ್ಚದೆ ಆ ತೂತಿನ ಮೇಲೆ ಪೋಲಿನ್ ಮೆಶ್ ಎಂಬ ಪ್ಲಾಸ್ಟಿಕ್‌ನ ಹಾಳೆಯೊಂದರಿಂದ ಮುಚ್ಚುವುದರಿಂದ ಹರ್ನಿಯಾ ಮರುಕಳಿಸುವ ಸಾಧ್ಯತೆ ತುಂಬಾ ಕಡಿಮೆಯಾಗಿದೆ. ಇತ್ತೀಚೆಗೆ ಈ ಹರ್ನಿಯಾ ಶಸ್ತ್ರಚಿಕಿತ್ಸೆಯನ್ನು ಲೆಪ್ರೋಸ್ಕೋಪಿ ಮುಖಾಂತರ ಮಾಡುವ ವಿಧಾನ ಜನಪ್ರಿಯವಾಗುತ್ತಿದ್ದರೂ ಇದನ್ನು ಮಾಮೂಲಿ ವಿಧಾನಕ್ಕಿಂತ ಇನ್ನೂ ಉತ್ತಮ ವಿಧಾನವೆಂದು ಪರಿಗಣಿಸುವಂತಿಲ್ಲ. ಹರ್ನಿಯಾದ ಶಸ್ತ್ರಚಿಕಿತ್ಸೆಯು 30ರಿಂದ 40 ನಿಮಿಷದಲ್ಲಿ ಮುಗಿಯುವ, ಸರ್ವೇ ಸಾಮಾನ್ಯವಾಗಿ ಎಲ್ಲಾ ಆಸ್ಪತ್ರೆಗಳಲ್ಲೂ ಮಾಡುವಂತಹಾ ಅಪರೇಶನ್ ಆಗಿದ್ದು ಈ ಅಪರೇಶನ್‌ನಿಂದ ಯಾವುದೇ ತೊಂದರೆಗಳು ಆಗುವ ಸಾಧ್ಯತೆ ತೀರಾ ಕಡಿಮೆ.

ಹರ್ನಿಯಾ ಕಾಯಿಲೆ ಯಾರಲ್ಲೂ ಕಾಣಿಸಿಕೊಳ್ಳಬಹುದಾದರೂ ಭಾರ ಎತ್ತುವ ಕೆಲಸ ಮಾಡುವವರಲ್ಲಿ, ಉಬ್ಬಸ ರೋಗಿಗಳಲ್ಲಿ, ಬೊಜ್ಜು ಶರೀರಿಗಳಲ್ಲಿ, ಬೀಡಿ ಸಿಗರೇಟು ಎಳೆಯುವವರಲ್ಲಿ ಇದು ಸಾಮಾನ್ಯ ಹಾಗೂ ಇಂತಹವರಲ್ಲಿ ಇದು ಮರುಕಳಿಸುವ ಸಾಧ್ಯತೆಯೂ ಹೆಚ್ಚು. ಹರ್ನಿಯಾ ಕಾಯಿಲೆ ಹೆಂಗಸರು ಮತ್ತು ಮಕ್ಕಳಲ್ಲಿ ಕಾಣಿಸಿಕೊಳ್ಳುವುದು ಅಪರೂಪವೇನಲ್ಲ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ.: 98451 36322**

## ವಿದ್ಯಾರ್ಥಿವೇತನ ನಿಧಿಗೆ ದೇಣಿಗೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ವಿದ್ಯಾರ್ಥಿ ವೇತನ ನಿಧಿಗೆ ಶ್ರೀಮತಿ ಶೋಭಾ ಕುಮಾರಿ, W/o ಪಿ. ಭಾಸ್ಕರರಾವ್, ಬಾಲವಾಡಿ ಮನೆ, ಕಿನ್ನಿಮೂಲ್ಕಿ ಇವರು ಪ್ರಸಕ್ತ ವರ್ಷದಲ್ಲಿ ರೂ.5,000/-ವನ್ನು ದೇಣಿಗೆಯಾಗಿ ನೀಡಿದ್ದಾರೆ. ಇವರಿಗೆ ಸಂಘವು ಆಭಾರಿಯಾಗಿದೆ.

## ವೈದ್ಯಕೀಯ ನೆರವು ನಿಧಿಗೆ ದೇಣಿಗೆ

ಚೆನ್ನೈಯಲ್ಲಿರುವ ಶ್ರೀಮತಿ ನಿರ್ಮಲಾ ರಾವ್‌ರವರು ವೈದ್ಯಕೀಯ ನೆರವು ನಿಧಿಗೆ ರೂ.5,000/-ವನ್ನು ತಮ್ಮ ಪತಿ ದಿ। ಬೆಳ್ಳೆ ರಾಮಚಂದ್ರರಾಯರ ಸ್ಮರಣಾರ್ಥ ದೇಣಿಗೆ ನೀಡಿರುತ್ತಾರೆ. ಕಳೆದ ವರ್ಷವೂ ಶ್ರೀಮತಿ ನಿರ್ಮಲಾ ರಾವ್‌ರವರು ವೈದ್ಯಕೀಯ ನಿಧಿಗೆ ದೇಣಿಗೆ ನೀಡಿದ್ದರು. ಅವರ ಕೊಡುಗೆಯನ್ನು ಸ್ಮರಿಸುತ್ತಾ ಸಂಘವು ಕೃತಜ್ಞತೆಯನ್ನು ಸಲ್ಲಿಸುತ್ತದೆ.

## ಬಂಟಕಲ್ಲು ಶ್ರೀ ಮಧ್ವ ವಾದಿರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ
## ನಮ್ಮ ಸಮಾಜ ಬಾಂಧವರಿಗಾಗಿ ಮಾಹಿತಿ

ಪ್ರೊ। ಸಾಂತೂರು ಸುಬ್ರಹ್ಮಣ್ಯ ರಾವ್ ಇವರು ಸದ್ಯ ಬಂಟಕಲ್ಲಿನಲ್ಲಿ ಇತ್ತೀಚೆಗೆ ತೆರೆಯಲ್ಪಟ್ಟ ಶ್ರೀ ಮಧ್ವ ವಾದಿರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಕಾಲೇಜು ಕಳೆದ ಶೈಕ್ಷಣಿಕ ವರ್ಷದಲ್ಲಿ ಪ್ರಾರಂಭವಾಗಿದ್ದು, ಸುಸಜ್ಜಿತ ಲೆಬೋರೇಟರಿ, ಅನುಭವಿ ಶಿಕ್ಷಕ ವೃಂದ ಮತ್ತು ಹುಡುಗ ಹಾಗೂ ಹುಡುಗಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸವಲತ್ತುಗಳನ್ನು ಹೊಂದಿದೆ.

ಇಲ್ಲಿ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ಹಾಗೂ ಕಂಪ್ಯೂಟರ್ ಇಂಜಿನಿಯರಿಂಗ್ ವಿಭಾಗಗಳಿವೆ.

CET ಪರೀಕ್ಷೆಗೆ ಬರೆದ ವಿದ್ಯಾರ್ಥಿಗಳು, CET ಸೆಂಟರ್‌ನ ಮೂಲಕ ಈ ಕಾಲೇಜುನ್ನು ಸಂಪರ್ಕಿಸಬಹುದು (Code 206)

ಈ ಕಾಲೇಜಿನಲ್ಲಿ 2ನೇ ವರ್ಷದ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಪ್ರವೇಶ ಸಾಧ್ಯ ಇದ್ದು ಅವರು CET ಪರೀಕ್ಷೆಗೆ ಬರೆಯಬೇಕು. ಅಲ್ಲದೆ ಮೆನೇಜ್‌ಮೆಂಟ್ ಕೋಟಾದಲ್ಲಿಯೂ ಪ್ರವೇಶ ಲಭ್ಯ. 5 ಮತ್ತು 6ನೇ ಸೆಮಿಸ್ಟರ್ ಡಿಪ್ಲೊಮಾ ಪರೀಕ್ಷೆಯಲ್ಲಿ ಕನಿಷ್ಟ 50% ಮಾರ್ಕ್ಸ್ ಬಂದಿರಬೇಕು.

ಹೆಚ್ಚಿನ ಮಾಹಿತಿಗಾಗಿ ನಮ್ಮ ಸಮಾಜ ಬಾಂಧವರು ಶ್ರೀಯುತ ಪ್ರೊ। S.S.Rao (Mobile No.9535270091) ಇವರನ್ನು ಸಂಪರ್ಕಿಸಬಹುದು.

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಬುಧವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.19-06-2011) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.09-07-2011 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.20-06-2011 ಜ್ಯೇಷ್ಠ ಕೃಷ್ಣಪಕ್ಷ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.16-06-2011 ಗುರುವಾರ ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**




Prop. :ADARSH RAO

**PRAMOD**
AUTOMOBILES
KARANGALPADY, MANGALORE - 575 003.
*30 Years of Service*
Ph : 2493633 (O)
2493633 (H.O.)
2212723 (R)
Mobile : 9448260225
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
**QUALITY FIRST AND ALWAYS**

**Buying and selling shares as easy as checking your emails**
**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

**ಎಮ್. ದೇವಾನಂದ್ ಭಟ್**
Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ

**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
ಎಡಪದವು - **574 164** (0824)-256374 (O) ಮಂಗಳೂರು, ದ.ಕ.

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**

ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org